ಕೊಡಗು ಸಂಗಾತಿ

ಸಂಪಾದಕಿ : ಪಟ್ಟೆಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K·R.N.N. 240 ಸಂಪುಟ : 2 ಸಂಚಿಕೆ : 13 ಜುಲೈ 1 ರಿಂದ 15–1998 ಪುಟಗಳು : 24 ರೂ. 5



ಸಾರಸ್ವತ ಲೋಕದ ದಿಗ್ಗಜ ಡಾ॥ ಬೆಸಗರಹಳ್ಳಿ ರಾಮಣ್ಣ (ಲೇಖನ ಒಳ ಪುಟಗಳಲ್ಲಿ)

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ

ಮುದ್ರಕರು :
ಮಣ್ಣುಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,
180/ಎ, 6ನೇ ಮುಖ್ಯ ರಸ್ತೆ,
ವಿನಾಯಕನಗರ, ಮೈಸೂರು-12

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 35, **"ಸವಿತಾ ನಿಲಯ"**
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು-12.
ಫೋನ್ : **516771**

ಮಡಿಕೇರಿಯ ನಮ್ಮ ವಿಳಾಸ

ಕೊಡಗು ಸಂಗಾತಿ
C/o ನಂಗಾರ್ ಆಡಿಯೋ ವೀಡಿಯೊ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ-571 201

ಒಳನೋಟ

ಪುಟಗಳು

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ

ತಜ್ಞರ ಅಭಿಪ್ರಾಯಗಳು

ವಿಜ್ಞಾನ ಮುಂದುವರೆದಂತೆಲ್ಲಾ ಪ್ರತಿಯೊಂದು ಕ್ಷೇತ್ರದಲ್ಲಿ ಒಬ್ಬೊಬ್ಬ ತಜ್ಞರಿರುತ್ತಾರೆ. ಈ ತಜ್ಞರು ಆಯಾಯ ಕ್ಷೇತ್ರದಲ್ಲಿ ವಿಶೇಷವಾದ ಪರಿಜ್ಞಾನ ಹೊಂದಿರುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಇಂತಹ ತಜ್ಞರು ತಮ್ಮದೇ ಆದ ಸ್ವಂತ ಸಂಸ್ಥೆಗಳನ್ನು ಸ್ಥಾಪಿಸಿ, ಜನರಿಗೆ ತಕ್ಕ ಸಲಹೆಗಳನ್ನು ಕೊಟ್ಟು ಶುಲ್ಕ ವಸೂಲು ಮಾಡುತ್ತಾರೆ. ಈಗ ಭಾರತದಲ್ಲೂ ದೊಡ್ಡ ದೊಡ್ಡ ನಗರಗಳಲ್ಲಿ ಈ ರೀತಿ ತಜ್ಞರ ಸಲಹಾ ಕೇಂದ್ರಗಳನ್ನು ತೆರೆಯುತ್ತಿದ್ದಾರೆ. ಉದಾಹರಣೆಗೆ ಆಟೋಮೋಬೈಲ್ ತಜ್ಞರು, ಕಾರ್ಮಿಕ ತಜ್ಞರು, ಮಾನಸಿಕ ತಜ್ಞರು ಮುಂತಾದವುಗಳನ್ನು ಕಾಣಬಹುದು.

ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ತಜ್ಞರಿಗೆ ಅವಶ್ಯವಿದ್ದರೂ, ಇಂತಹ ಸಲಹಾ ಕೇಂದ್ರಗಳನ್ನು ತೆರೆಯುವಷ್ಟು ನಮ್ಮ ಜನ ಆ ಮಟ್ಟವನ್ನು ತಲುಪಲಿಲ್ಲ. ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಜನರು ವಿದ್ಯಾವಂತರಾಗಲಿಲ್ಲ. ಆದ್ದರಿಂದ ಈ ರೀತಿಯ ತಜ್ಞರ ಕೇಂದ್ರಗಳು ಕೆಲಸ ಮಾಡಲು ಸಾಧ್ಯವಿಲ್ಲ. ಶೇಕಡಾ ನೂರರಷ್ಟು ಪ್ರತಿಯೊಂದು ಹಳ್ಳಿಯಲ್ಲಿ ವಿದ್ಯಾವಂತರಾದರೆ ಮಾತ್ರ ಈ ರೀತಿಯ ತಜ್ಞರ ಕೇಂದ್ರಗಳನ್ನು ಅಲ್ಲಲ್ಲಿ ತೆರೆಯಬಹುದು. ಅದರ ಬದಲು ಈಗ ನಮ್ಮ ಗ್ರಾಮಾಂತರ ಪ್ರದೇಶದ ಸಮಾಜಗಳು, ಮಹಿಳಾ ಸಮಾಜಗಳು-ಯುವಕ ಸಂಘಗಳು ಅವರವರ ಕ್ಷೇತ್ರಕ್ಕೆ ಬೇಕಾದ ಸಲಹೆಗಳನ್ನು ಪಡೆಯುವುದಕ್ಕೆ ಗ್ರಾಮಗಳಲ್ಲಿ ಸಭೆಗಳನ್ನು ಏರ್ಪಡಿಸಿ, ಅವರವರಿಗೆ ಬೇಕಾದ ತಜ್ಞರನ್ನು ಅಲ್ಲಿಗೆ ಕರೆಸಿ, ಅಂತಹ ತಜ್ಞರಿಂದ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಬೇಕು.

ಉದಾಹರಣೆಗೆ ಕೋಳಿ, ಹಂದಿ, ರೇಶ್ಮೆ ಸಾಕಾಣಿಕೆಗಾಗಿ ಗ್ರಾಮದ ಸಮಾಜ ಆಯಾಯ ತಜ್ಞರನ್ನು ಕಂಡು ಸಲಹೆಯನ್ನು ಪಡೆದುಕೊಳ್ಳುವುದು. ಅದೇ ರೀತಿ ಮಹಿಳಾ ಸಮಾಜಗಳು ಮಹಿಳೆಯರ ಮತ್ತು ಮಕ್ಕಳ ತಜ್ಞ ವೈದ್ಯರನ್ನೂ ಕರೆಸಿ, ಗರ್ಭಿಣಿ ಮಹಿಳೆ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ತಕ್ಕದಾದ ಸಲಹೆಯನ್ನು ಪಡೆಯುವುದು. ಮಕ್ಕಳ ಪೋಷಣೆ ವಿಷಯವನ್ನು ತಜ್ಞರಿಂದ ತಿಳಿದುಕೊಳ್ಳುವಂತೆ ಮಾಡುವುದು, ವಿದ್ಯಾರ್ಥಿಗಳು ಯಾವ ಯಾವ ವಿಷಯವನ್ನು ತೆಗೆದುಕೊಂಡರೆ ಅವನ/ಅವಳ ಅಭಿವೃದ್ಧಿಗೆ ಸಾಧ್ಯವಾದೀತು ? ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯ ಬುದ್ಧಿಮಾಪನ ಮಾಡುವ ಶೈಕ್ಷಣಿಕ ತಜ್ಞರನ್ನು ಕರೆಯಿಸಿ ತಪಾಸಣೆ ಮಾಡುವುದರಿಂದ ಚಿಕ್ಕಂದಿನಿಂದಲೇ ವಿದ್ಯಾರ್ಥಿ ವಿದ್ಯಾರ್ಥಿನಿಯರು ಯಾವ ವಿಷಯವನ್ನು ಆರಿಸಿಕೊಂಡರೆ ಆ ಮಗುವಿನ ಅಭಿವೃದ್ಧಿಯಾಗಬಹುದು. ಆ ಮಗುವಿಗೆ ಜೀವನದಲ್ಲಿ ಯಾವ ವಿಷಯದಲ್ಲಿ ತರಬೇತಿ ಕೊಡಬೇಕೆಂಬುದನ್ನು ಮನಶಾಸ್ತ್ರ ತಜ್ಞರಿಂದ ಕಂಡುಕೊಳ್ಳಬಹುದು. ಇದನ್ನು ಒಬ್ಬೊಬ್ಬ ಮಗುವಿಗೆ ಪ್ರತ್ಯೇಕವಾಗಿ ತಪಾಸಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಹಿಳಾ ಸಮಾಜಗಳು ತಜ್ಞರನ್ನು ಭೇಟಿಮಾಡಿ ಅವರಿಗೆ ಅಂತಹ ತಪಾಸಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿದುಕೊಂಡು ಮಹಿಳಾ ಸಂಘಗಳು ಇಂತಹ ದಿನದಂದು ತಮ್ಮ ಸುತ್ತಮುತ್ತಲಿನ ಮಕ್ಕಳನ್ನು ಇಂತಹ ಸ್ಥಳಕ್ಕೆ ಕರೆದುಕೊಂಡು ಬರುತ್ತಾರೆಂದು ತಿಳಿಸಿದರೆ ತಜ್ಞರು ಅಲ್ಲಿಗೆ ಬರುವಂತೆ ಏರ್ಪಾಡು ಮಾಡಬೇಕು. ಇದೇ ರೀತಿ ಗರ್ಭಿಣಿ ಹೆಂಗಸರ ತಪಾಸಣೆಯನ್ನು ಮಹಿಳಾ ಸಮಾಜಗಳು ಏರ್ಪಾಡುಮಾಡಿ ತಜ್ಞ ಡಾಕ್ಟರುಗಳನ್ನು ಅಲ್ಲಿಗೆ ಬರಮಾಡಿಸಿ ಮಹಿಳೆ ಗರ್ಭಿಣಿಯಾದ ಸಮಯದಲ್ಲಿ ಯಾವತೊಂದರೆ ಇದೆ ಎನ್ನುವುದನ್ನು ತಿಳಿದು ಅದಕ್ಕೆ ಬೇಕಾದ ಪರಿಹಾರವನ್ನು ಡಾಕ್ಟರುಗಳ ಮುಖಾಂತರ ತಿಳಿದುಕೊಂಡು ಗರ್ಭಿಣಿ ಮಹಿಳೆ, ಹೆರುವುದಕ್ಕೆ ಮೊದಲು ಅಥವ ಅನಂತರವೂ ಅನುಸರಿಸಬೇಕಾದ ಮಾರ್ಗೋಪಾಯವನ್ನು ಕಂಡುಕೊಳ್ಳಬಹುದು. ಇದರಿಂದಾಗಿ ಗರ್ಭಿಣಿ ಮಹಿಳೆಯ ಆರೋಗ್ಯವನ್ನು ಕಾಪಾಡಿಕೊಳ್ಳುವುದಲ್ಲದೆ ಮಗುವನ್ನು ಹೆತ್ತ ನಂತರ ಏನೇನು ಉಪಚಾರಗಳನ್ನು ಮಾಡಬೇಕೆಂದು ತಿಳಿಸುವ ಏರ್ಪಾಡಾಗುವುದಲ್ಲದೆ ಮಗುವನ್ನು ಆರೋಗ್ಯವಾಗಿ ಬೆಳೆಸುವ ವಿಧಾನವನ್ನು ಕಷ್ಟ ಬಂದಾಗ ಓಡಾಡುವ ಪ್ರಮೇಯವನ್ನೂ, ಅನಾವಶ್ಯಕ ಓಡಾಟ, ಹಣದ ವೆಚ್ಚ, ಅನಾವಶ್ಯಕವಾಗಿ ನರ್ಸಿಂಗ್ ಹೋಂಗಳಿಗೆ ಹಣ ಸುರಿಯುವ ಸಂದರ್ಭವನ್ನು ತಪ್ಪಿಸಬಹುದು. ಅದೇ ರೀತಿ ಯುವಕ-ಯುವತಿಯರ ಲೈಂಗಿಕ ಸಮಸ್ಯೆ, ಮದುವೆಯ ಸಮಸ್ಯೆ ಮತ್ತು ನಿರುದ್ಯೋಗ ನಿವಾರಣೆಯ ಉಪಾಯವನ್ನು ವೈಜ್ಞಾನಿಕವಾಗಿ, ಸಾಮೂಹಿಕವಾಗಿ ನಿವಾರಿಸಲು ಸರ್ಕಾರದ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಸಹಾಯ ಪಡೆದುಕೊಳ್ಳಬಹುದು. ಯುವಕ-ಯುವತಿಯರು ತಮ ಭವಿಷ್ಯವನ್ನು ನಿರ್ಧರಿಸುವುದಕ್ಕೆ ಆಯಾಯ ಕ್ಷೇತ್ರದ ತಜ್ಞರನ್ನು ಕಂಡು ತಕ್ಕ ಸಲಹೆಗಳನ್ನು ವ್ಯಕ್ತಿಗತವಾಗಲೀ, ಸಾಮೂಹಿಕವಾಗಲೀ ಕಂಡುಕೊಳ್ಳಲು ಸಾಧ್ಯವೆಂದು ಸಂಗಾತಿಯ ಸೂಚನೆ.

ಸೌಮ್ಯ ಸರಳ ಸ್ವಭಾವದ ಶ್ರೀ ಯಾಲದಾಳು ದೇವಯ್ಯ ಕೇಶವಾನಂದ

ಹೊರನೋಟಕ್ಕೆ ದೃಢಕಾಯ ಶರೀರದ ಗಂಭೀರತೆ ಆದರೆ ಅಷ್ಟೇ ಸರಳತೆ ಸೌಮ್ಯ ಸಾದರ ಮೂರ್ತಿ, ಶ್ರೀ ಯಾಲದಾಳು ದೇವಯ್ಯ ಕೇಶವಾನಂದನವರು ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಸಾರ್ವಜನಿಕ ಹಾಗೂ ಸರಕಾರಿ ನಾನಾ ವಲಯ ಗಳಲ್ಲಿ ಪರಿಚಯದವರಾದರೂ ಕೂಡಾ ಕೊಡಗು ಸಂಗಾತಿ ನಮ್ಮ ಜನಾಂಗದವರಿಗೆ ಹೆಚ್ಚಿಗೆ ಪರಿಚಯ ಮಾಡಿಕೊಡಲು ಇತ್ತೀಚೆಗೆ ಜುಲೈ ತಿಂಗಳ ಜಡಿ ಮಳೆಯಲ್ಲಿ ಭೇಟಿ ಮಾಡಲು ಅವರ ಸರ್ಕಾರಿ ಬಂಗಲೆಯ ಕದವನ್ನು ತಟ್ಟಿದಾಗ ಅವರ ಶ್ರೀಮತಿಯವರು ಆದರದ ಸ್ವಾಗತವು ಮಿರಮಿರನೆ ಮಿನುಗುವ ಕೆಂಡದ ಅಗ್ಗಿಷ್ಟಿಕೆ ಸುಸ್ವಾಗತವನ್ನು ಕೋರಿತು.

ಕೊ. ಸ: ತಾವು ಹುಟ್ಟೂರಿಗೆ ವರ್ಗವಾಗಿ ಬಂದು ಈಗಾಗಲೆ ಆರುತಿಂಗಳು ಕಳೆದಿದೆಯಾದರೂ ಕೊ. ಸಂಗಾತಿ ಮೂಲಕ ತಮ್ಮ ಹೆಚ್ಚಿನ ಪರಿಚಯವನ್ನು ತಿಳಿಸಬಹುದೆ ?

ಉ : ಮಡಿಕೇರಿ ತಾಲೂಕು ಗಾಳಿಬೀಡು ಗ್ರಾಮದ ಯಾಲ ದಾಳು ದಿ॥ ಶ್ರೀ ದೇವಯ್ಯ ದಂಪತಿಗಳಿಗೆ ನಾವು 5 ಜನ ಮಕ್ಕ ಳಲ್ಲಿ 2ನೇಯ ಮಗನೇ ನಾನು 23-2-1945ರಲ್ಲಿ ನನ್ನ ಜನನ ಹಿರಿಯಣ್ಣ ರೈತಾಪಿ ಕಾರ್ಯದ ಹೊಣೆಗಾರಿಕೆ ಹೊತ್ತುಕೊಂಡರೆ, ಕಿರಿಯ 2 ಜನ ತಮ್ಮಂದಿರು ಒಂದು ಕಾಲದ ಮಡಿಕೇರಿ ಜೀವ ವಿಮಾ ಸಂಸ್ಥೆಯ 'ಕೋಟಿಪತಿ' ಏಜೆಂಟರೆಂದು ಕೀರ್ತಿಗೆ ಪಾತ್ರರಾಗಿದ್ದರು. ಈಗ ಮೋಹನ ಮಾತ್ರ ಏಜೆಂಟರಾಗಿ ಶಾಖೆಗೆ ದುಡಿಯುತ್ತಿದ್ದಾರೆ. ಇನ್ನೊಬ್ಬರು ಟೆಲಿಕಾಂ ಸಂಸ್ಥೆಯಲ್ಲಿ ಖಾಯಂ ಗುತ್ತಿಗೆದಾರರಾಗಿ ದುಡಿಯುತ್ತಿದ್ದಾರೆ. ಒಬ್ಬಳೆ ಅಕ್ಕ ಶಾಲಾ ಶಿಕ್ಷಕಿ ಮತ್ತು ಪಾರಿಮಜಲು ಕುಟುಂಬದ ಸೊಸೆ.

ಸಂ : ತಮ್ಮ ವಿದ್ಯಾಭ್ಯಾಸವನ್ನು ಎಲ್ಲೆಲ್ಲಿ ಮಾಡಿದ್ದೀರಿ ?

ಉ : ಗಾಳಿಬೀಡಿನ ಶಾಲೆಯಲ್ಲಿ ಪ್ರಾಥಮಿಕ ಮಟ್ಟದಿಂದ ಮಿಡ್ಲ್ ಸ್ಕೂಲಿನವರೆಗೂ, ಸೆಂಟ್ರಲ್ ಹೈಸ್ಕೂಲ್ [ಈಗಿನ ಜೂ. ಕಾಲೇಜು] ಮತ್ತು ಹಿರಿಯ ಕಾಲೇಜಿನ ವಿದ್ಯಾಭ್ಯಾಸ [ಈಗಿನ ಫೀ. ಮಾ. ಕಾ. ಕಾ] ಮಡಿಕೇರಿಯಲ್ಲಿ ಆಯಿತು. ಆಗಿನ ಕಾಲದಲ್ಲಿ ಬಸ್ಸು ಸೌಕರ್ಯಗಳಿರಲಿಲ್ಲ. 7 ವರ್ಷ ಕಾಲ್ನಡಗೆಯಿಂದ ದಾರಿಯನ್ನು ಸವೆದು 1966ರಲ್ಲಿ ಬಿ. ಎ. ಡಿಗ್ರಿ ಪದವಿ ಪಡೆದು ಮುಂದೆ 1969ರಲ್ಲಿ ಮದ್ರಾಸ್ ಲಾ ಕಾಲೇಜಿನಿಂದ ಕಾನೂನು ಪದವಿ ಪಡೆದುಕೊಂಡೆನು.

ಸಂ : ಕರ್ನಾಟಕ ರಾಜ್ಯ ಪೋಲೀಸ್ ಪಡೆಯಲ್ಲಿ ಸೇರ್ಪಡೆ ಯಾವಾಗ ಮತ್ತು ಹಿರಿಯ ಡಿ.ವೈ.ಎಸ್.ಪಿ. ಯಾಗಿ ತಮ್ಮ ಹುಟ್ಟೂರಿಗೆ ಬರುವ ಮುಂಚೆ ಎಲ್ಲೆಲ್ಲಿ ಕಾರ್ಯ ನಿರ್ವಹಿಸಿದ್ದೀರಿ?

ಉ : 1970 ರಲ್ಲಿ ಎಸ್. ಪಿ. ಆಗಿ ಸೇರ್ಪಡೆ. ಮೈಸೂರು ಪೋಲೀಸ್ ತರಬೇತಿ ಕಾಲೇಜಿನಲ್ಲಿ ತರಬೇತು ಮುಗಿಸಿ ಪ್ರಥಮ ಪೋಸ್ಟಿಂಗ್ ಭದ್ರಾವತಿಗೆ ಆಯಿತು. ಮುಂದೆ ಕರ್ನಾಟಕ ಸ್ಥಳ ಗಳಾದ ಚೆನ್ನಗಿರಿ, ನೇಮತಿ, ಎಸಲೂರು, ಬೆಂಗಳೂರಿನ ಗಣಕ ಕೇಂದ್ರ [ಕಂಪ್ಯೂಟರ್], ಸಾಲಿಗ್ರಾಮಗಳಲ್ಲಿ ಕಾರ್ಯ ನಿರ್ವ ಹಿಸಿದ್ದೇನೆ. ಸಾಲಿಗ್ರಾಮದಿಂದ ಸಿ. ಐ. ಆಗಿ ಬಡ್ತಿ ಹೊಂದಿ



ಯಾಲದಾಳು ಕೇಶವಾನಂದ ದಂಪತಿಗಳು

ಪುನಃ ಸಿ.ಓ.ಡಿ. ಬೆಂಗಳೂರಿಗೆ ವರ್ಗಾವಣೆ. ಅಲ್ಲಿಂದ ಕೊಪ್ಪ, ಶಿರಸಿ, ತೀರ್ಥಹಳ್ಳಿ ಮತ್ತು ಗುಲ್ಬರ್ಗಗಳಿಗೆ ವರ್ಗವಾಗಿ ಹೋಗಿ ಗುಲ್ಬರ್ಗದಲ್ಲಿ ದುಡಿಯುತ್ತಿದ್ದಾಗ ಅಂದರೆ 1997ರಲ್ಲಿ ಡಿ.ವೈ. ಎಸ್.ಪಿ. ಆಗಿ ಬಡ್ತಿ ಹೊಂದಿ ಡಿ.ಐ.ಜಿ. ಕಛೇರಿ ಗುಲ್ಬರ್ಗದಲ್ಲಿದ್ದೆನು. ಡಿಸಂಬರ್ ತಿಂಗಳಲ್ಲಿ ಮಡಿಕೇರಿಗೆ ಬಂದು ಇಲ್ಲಿನ ಪೋಲೀಸ್ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

ಸಂ : ಹಿರಿಯ ಪೋಲೀಸ್ ಅಧಿಕಾರಿ ಆದ ತಮಗೆ ಹುಟ್ಟೂರಿನ ಪೋಸ್ಟಿಂಗ್ ಏನೆನಿಸುತ್ತದೆ ?

ನೆಮ್ಮದಿ ಮತ್ತು ಸಂತೋಷ ತಂದಿದೆ. 28 ವರ್ಷ ಕಾಲಾವಧಿಯಲ್ಲಿ ಪ್ರಥಮ ಬಾರಿಗೆ ಸ್ವಂತ ಊರಿಗೆ ಬರುತ್ತಿದ್ದಾಗ ಗೆಳೆಯ ವೃಂದದವರು ಊರು ಪೋಸ್ಟಿಂಗ್ ಬಗ್ಗೆ ಏನೇನೋ ಹೇಳುತ್ತಿದ್ದರೂ ನನಗಂತೂ ತುಂಬಾ ನೆಮ್ಮದಿ ದೊರೆತಿದೆ. ಮತ್ತು ಈ ದೀರ್ಘ ಕಾಲದ ಸೇವೆಯು ನನಗೆ ತೃಪ್ತಿಯನ್ನು ನೀಡಿದೆ. ನನ್ನ ಕೈಲಾದ ಸೇವೆ ಮಾಡಬೇಕೆಂದಿದ್ದೇನೆ.

ಸಂ : ತಾವು ಕಾಲೇಜು ರಂಗದಲ್ಲಿದ್ದಾಗಲೇ ಕ್ರೀಡಾ ಕೂಟ ಗಳಲ್ಲಿ ಹೆಸರು ತಂದಿದ್ದೀರಿ ಎಂದು ಕೇಳಿದ್ದೇವೆ. ಮುಂದೆ ಪೋಲೀಸ್ ಇಲಾಖೆಗೆ ಇನ್ನೂ ಹೆಚ್ಚಿನ ಕೀರ್ತಿ ತಂದಿರಬೇಕಲ್ಲಾ ?

ಉ : ಗದ್ದೆ ಓಟ, ಡಿಸ್ಕಸ್‌ಥ್ರೋ, ಭಾರದ ಕಲ್ಲು ಎಸೆತದಲ್ಲಿ

ನಾನು ಕಾಲೇಜಿನ ಚಾಂಪಿಯನ್ ಆಗಿದ್ದೆನು. 'ಲಾ' ಕಾಲೇಜಿನಲ್ಲೂ ಮುಂದುವರಿದು 1980ರಲ್ಲಿ ಕರ್ನಾಟಕ ರಾಜ್ಯ ಮಟ್ಟದ ಪೋಲೀಸ್ ಕ್ರೀಡಾಕೂಟದ 'ಡಿಸ್ಕಸ್‌ಥ್ರೋ'ದಲ್ಲಿರಾಷ್ಟ್ರಕ್ಕೆ ಎರಡನೆ ಸ್ಥಾನ ಗಿಟ್ಟಿಸಿಕೊಂಡಿದ್ದೆನು.

ಸಂ : ಗೌಡ ಸಮಾಜದ ಸೇವೆ ಅದರಡಿಯಲ್ಲಿ ನಿಮ್ಮ ಕಾಳಜಿ?

ಉ : ಅದು ಇದ್ದೇ ಇದೆ. ಪೋಲೀಸ್ ಅಧಿಕಾರಿಯಾಗಿದ್ದು ಸಮಾಜದಲ್ಲಿ ಸ್ವತಂತ್ರನಾಗಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಕಷ್ಟಸಾಧ್ಯವಾಗಿದ್ದರೂ ಕೂಡ ಹಾಸನದಲ್ಲಿದ್ದಾಗ ನಾನೇ ಸ್ವತಃ ಆ ಜಿಲ್ಲೆಯಾದ್ಯಂತ ಅಂದಾಜು 150 ಸದಸ್ಯರು ಅಂದರೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದ ನಮ್ಮ ಅರೆಭಾಷಿಕರನ್ನು ಕಲೆಹಾಕಿ, ಸಮಾಜ ಕಟ್ಟಿ ಕೈಲ್ ಮುಹೂರ್ತ, ಹುತ್ರಿ ಹಬ್ಬಗಳನ್ನು ಆಚರಿಸುತ್ತಿದ್ದೇವು. ನನ್ನ ಧರ್ಮ ಪತ್ನಿ ಕೂಡಾ ಪೋಲೀಸ್ ಮಹಿಳಾ ಸಮಾಜದ ಕಾರ್ಯದರ್ಶಿಯಾಗಿ ದುಡಿದಿದ್ದಾಳೆ. ನಮ್ಮ ಜನಾಂಗದ ಸಂಸ್ಕೃತಿ ಬಗ್ಗೆ ನನಗೂ, ನನ್ನ ಕುಟುಂಬದ ಸದಸ್ಯರಿಗೆ ಮಾತ್ರವಲ್ಲ ಇಡೀ ಊರಿನ ಭಾಂದವರಿಗೆ ತುಂಬಾ ಅಭಿಮಾನ ಇದೆ. ಅಕಾಡಮಿ ವತಿಯಿಂದ ಭಾಗಮಂಡಲದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳಲ್ಲಿ ನನ್ನ ಊರಿನವರ ತಂಡದವರು ಕಾಳಜಿ ವಹಿಸಿದ್ದನ್ನು ಇಲ್ಲಿ ಸ್ಮರಿಸುತ್ತೇನೆ. ನನ್ನ ಮಾತಾಪಿತೃಗಳ ಜ್ಞಾಪಕಾರ್ಥ ಗಾಳಿಬೀಡು ಶಾಲೆಯ 10ನೇ ತರಗತಿಯಲ್ಲಿ ಹೆಚ್ಚಿನ ಅಂಕಳಿಸಿದ ವಿದ್ಯಾರ್ಥಿಗೆ ಸ್ಕಾಲರ್‌ಶಿಪ್ ಅನ್ನು 1993 ರಿಂದೀಚೆ ಕೊಟ್ಟು ಪ್ರೋತ್ಸಾಹಿಸುತ್ತಾ ಬಂದಿದ್ದೇನೆ.

ಸಂ : ತಮ್ಮ ಧರ್ಮಪತ್ನಿ ಮತ್ತು ಮಕ್ಕಳ ಬಗ್ಗೆ ಸ್ವಲ್ಪ ವಿವರ ನೀಡುತ್ತೀರಾ ?

ಉ : ದಂಬೆಕೋಡಿ ದಿ|| ಶ್ರೀ ಸುಬ್ರಾಯನವರ 2ನೇ ಸುಪುತ್ರಿ ಗಂಗ ನನ್ನ ಧರ್ಮಪತ್ನಿ. ಚಂದನ್ ಮತ್ತು ಚೇತನ್ ಎಂದು ಪ್ರೀತಿಯ 2ಜನ ಗಂಡು ಮಕ್ಕಳು. ಹಿರಿಮಗ ಚಂದನ್ ಎಂ. ಇ. ಯಲ್ಲಿ ಓದುತ್ತಿದ್ದಾಗ ಅಂದರೆ ಈಗಾಗಿ ಆರ್ಮಿಯಲ್ಲಿ ಲೆಫ್ಟಿನೆಂಟ್‌ಗೆ ಆಯ್ಕೆಯಾಗಿ, ಡೆಹ್ರಡೂನಿನ ತರಬೇತು ಕಾಲೇಜಿಗೆ ಸೇರಿದ್ದಾನೆ. ಚೇತನ್ ತುಮಕೂರಿನ ಆರ್ಕಿಟೆಕ್ಚರ್ ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ಬಿ. ಇ. ಓದುತ್ತಿದ್ದಾನೆ. ಅವನಿಗೆ ನಮ್ಮ ಜನಾಂಗದ ಸಂಸ್ಕೃತಿಯ ಬಿಳಿಕುಪ್ಪಸ, ದಟ್ಟಿರುಮಾಲು ಅವನ ಹಠದ ಮೇರೆ ರೆಡಿ ಮಾಡಿಸಿದ್ದನ್ನು ಅವನ ಅಮ್ಮ ತಂದು ತೋರಿಸಿದಾಗ ಕೊ. ಸಂ. ನಮ್ಮ ಜನಾಂಗದ ಪರವಾಗಿ ಇಂತಹ ಯುವಕರನ್ನು ಹೃದಯ ತುಂಬಾ ಮೆಚ್ಚಿಕೊಂಡಿತು.

ಸಂ : ಕೊ. ಸಂ. ಪತ್ರಿಕೆ ಬಗ್ಗೆ ನಿಮ್ಮ ಸಲಹೆ ಏನಾದರೂ ಇದೆಯಾ ?

ಉ : ಇದು ನನ್ನ ಕುಟುಂಬದ ನೆಚ್ಚಿನ ಪತ್ರಿಕೆ. ನಮ್ಮ ಜನಾಂಗ ಸಂಸ್ಕೃತಿ ಎತ್ತಿಹಿಡಿದುಪ್ರಚಾರ ಮಾಡುತ್ತಿರುವ ಏಕೈಕ ಮಾಧ್ಯಮ. ನಮ್ಮ ಜನಾಂಗಕ್ಕೆ ಹೆಮ್ಮೆ ತಂದಿರುವ ಇದನ್ನು ಉಳಿಸಿ ಬೆಳಸುವುದು ನಮ್ಮ ಜನಾಂಗದ ಪತ್ರಿಯೊಬ್ಬರ ಆದ್ಯ ಕರ್ತವ್ಯವಾಗಿದೆ.

ಸಂ : ನಮ್ಮ ಜನಾಂಗದ ನವ ನಿರುದ್ಯೋಗಿ ಯುವಕ ಯುವತಿಯರಿಗೆ ತಮ್ಮ ಕಿವಿ ಮಾತು ?

ಉ : ಕೊಡಗಿನ ಜಮ್ಮ ಹಿಡುವಳಿ ಆಸ್ತಿಯನ್ನೇ ನಂಬಿ ಕೈಕಟ್ಟಿ ಕೂತಿರದೆ ತನ್ನ ಸ್ವಂತ ಪ್ರತಿಭೆಯ ಸಾಧನೆಗಳೊಂದಿಗೆ ಸಾಗುತ್ತಿರಬೇಕು. ಬರೆ ಡಿಗ್ರಿಗಳಿಂದ ಪ್ರಯೋಜನವಿಲ್ಲ. ಗುಣ ಸಂಪನ್ನ ವಿನಯಶೀಲರಾಗಿರಬೇಕು.

45 ನಿಮಿಷಗಳ ಕಾಲ ಕೊ. ಸಂಗಾತಿ ಪರವಾಗಿ ಹಿರಿಯ ಅಧಿಕಾರಿ ಶ್ರೀ ಪೈ. ಡಿ. ಕೇಶವಾನಂದರವರನ್ನು ಮಾತನಾಡಿಸಿ ಹೊರಬರುವ ಮುನ್ನ ಆದ ಅನುಭವವನ್ನು ಸೂಕ್ಷ್ಮವಾಗಿ ನಮ್ಮ ಜನಾಂಗದ ಭಾಂದವರಿಗೆ ತಿಳಿಸುವುದೇನೆಂದರೆ ಅಪ್ಪಟ ಅರೆಭಾಷೆ, ಕೊಡಗು ಗೌಡ ಸಂಸ್ಕೃತಿಯ ನೆಲೆ ಇವರ ಕುಟುಂಬದಲ್ಲಿದೆ. ಅವರಿಗೆ ಸಮಾಜದ ಮತ್ತು ಸಂಸ್ಕೃತಿಯ ಮೇಲೆ ಇರುವ ಹಂಬಲಗಳನ್ನು ತಿಳಿಯಲು ಅವರ ಜಂಟಿ ಫೋಟೋದಲ್ಲಿ ಗೇಂಟಿಗೆ ಸೀರೆಯನ್ನುಟ್ಟು ಶೋಭಿಸುವ ಅವರ ಧರ್ಮಪತ್ನಿಯ ಉಡುಪು ಮತ್ತು ಸ್ಪಷ್ಟ ಮಾತುಗಳೇ ಸಾಕ್ಷಿ. ನಮ್ಮ ಹಿರಿಕಾಲದಿಂದ ಹಿರಿಯರು ಉಟ್ಟುಕೊಂಡು ಬಂದಿರುವ (ಅಂದರೆ ಆಯಾ ಸಮಾರಂಭಗಳಿಗೆ ತಕ್ಕಂತೆ) ಉಡುಪನ್ನು ಹಬ್ಬಹರಿದಿನ,ಮದುವೆ ವಿಶೇಷ ಪೂಜಾ ಸಮಾರಂಭಗಳಲ್ಲಿ ಉಡುವುದು ವಿಶೇಷವೆನಿಸುತ್ತದೆ ಎಂದು ಅವರ ಧರ್ಮಪತ್ನಿ ಅನ್ನುತ್ತಾರೆ. ಗೌಡರ ಸಂಸ್ಕೃತಿಪೂರಕವಾದ ಅಪ್ಪಟ ಅರೆಭಾಷೆ, ಬೆಳಿಗ್ಗಿನ ಅಕ್ಕಿರೊಟ್ಟಿ, ರಾತ್ರಿಹೊತ್ತಿನ ಸ್ನಾನವನ್ನು ಕೇಶವಾನಂದರವರು ಇನ್ನೂ ಜೀವಂತ ಉಳಿಸಿಕೊಂಡಿರುವರಂತೆ. ಸರಕಾರಿ ಕೆಲಸದ ಒತ್ತಡದಲ್ಲೂ ತಮ್ಮ ಅಲ್ಪ ಸೇವೆಯನ್ನು ನಮ್ಮ ಜನಾಂಗದ ಸೇವೆಗೆ ಮೀಸಲಿಡುವಂತೆ ಕಂಡುಬಂದಿತು.

ಇವರಿಗೂ ಅವರ ಕುಟುಂಬದವರಿಗೂ ಇನ್ನೂ ಹೆಚ್ಚಿನ ಶ್ರೇಯಸ್ಸು ಲಭಿಸಲಿ ಎಂದು ನಮ್ಮ ಜನಾಂಗದ ಪರವಾಗಿ "ಕೊಡಗು ಸಂಗಾತಿ" ಶುಭ ಹಾರೈಸುತ್ತದೆ.

○ ಬೈತಡ್ಕ ಎ. ಬೆಳ್ಯಪ್ಪ, ಮಡಿಕೇರಿ

ಸರ್ವಜ್ಞ

ನಂಬುತಿರು ನಂಬದಿರು । ಎಂಬುವರು ಮಾನವರು !
ಸಂಬಾರವರೆವ ಬಲುಕಲ್ಲ ಹರನೆಂದು
ನಂಬುವವರಾರು ? ಸರ್ವಜ್ಞ ||

ಗೌಡಕೇಸರಿ ನಿಡ್ಯಮಲೆ ಮುದ್ದಪ್ಪನವರ ಜೀವನ ಚರಿತ್ರೆ - ಭಾಗ ೪

[ಹಿಂದಿನ ಸಂಚಿಕೆಯಿಂದ]

ಶ್ರೀಯುತ ದಿವಂಗತ ನಿಡ್ಯಮಲೆ ಮುದ್ದಪ್ಪನವರ ತಂದೆ ರಾಮಪ್ಪ ಮತ್ತು ತಾಯಿ ತಂಗಮ್ಮ ದಂಪತಿಗಳಿಗೆ ದ್ವಿತೀಯ ಪುತ್ರರಾಗಿ 1895ನೇ ಇಸವಿಯಲ್ಲಿ ಪೆರಾಜೆ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ರಾಮಪ್ಪನವರು ಆಗಿನ ಬ್ರಿಟೀಷ್ ಆಳ್ವಿಕೆಯಲ್ಲಿ ಪಾರುಪತ್ತೇಗಾರರಾಗಿದ್ದರು. ಇವರು ಅತ್ಯಂತ ಗೌರವಾನ್ವಿತರಾಗಿದ್ದು, ಅಂದಿನ ಕಾಲದಲ್ಲಿ ಬಹಳ ಹೆಸರುವಾಸಿಯಾಗಿದ್ದರು. ರಾಮಪ್ಪನವರಿಗೆ ಮೂರು ಜನ ಗಂಡು ಮಕ್ಕಳು. ಮೊದಲನೆಯವರು ದಿವಂಗತ ನಿಡ್ಯಮಲೆ ಬೆಳ್ಯಪ್ಪನವರು. ಇವರು ಕೊಡಗಿನ ಚೀಫ್ ಕಮೀಷನರ್‌ರವರ ಕಛೇರಿಯಲ್ಲಿ ಹೆಡ್ ಮುನ್ಸಿ

● ಪ್ರೊ॥ ನಿಡ್ಯಮಲೆ ಜ್ಞಾನೇಶ್, ಸುಳ್ಯ

ಆಗಿದ್ದರು. ಇವರ ತಮ್ಮ ದಿ॥ ನಿಡ್ಯಮಲೆ ಮುದ್ದಪ್ಪನವರು. ಇನ್ನೊಬ್ಬ ತಮ್ಮ ಕೊಡಗಿನ ಪ್ರಪ್ರಥಮ ಪಾರ್ಲಿಮೆಂಟ್ ಮೆಂಬರಾಗಿದ್ದ ದಿ॥ ನಿಡ್ಯಮಲೆ ಸೋಮಣ್ಣನವರು. ಇವರು ಮೂವರು ತಂದೆಗೆ ತಕ್ಕ ಮಕ್ಕಳಾಗಿ ಶ್ರೇಷ್ಠ ಜೀವನ ಸಾಗಿಸಿದರು.

ದಿ॥ ರಾಮಪ್ಪನವರು 5ನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಹೊಂದಿದ್ದರು. ಇವರು ಅತ್ಯಂತ ಮೇಧಾವಿ ಮತ್ತು ಜನಾಕರ್ಷಣೆಯ ವ್ಯಕ್ತಿಯಾಗಿದ್ದರು. ಇವರು ಕೊಡಗಿನ ಭಾಗಮಂಡಲ ನಾಡಿನಲ್ಲಿ ಪಾರುಪತ್ತೇಗಾರರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕೆಲವು ಜಾತಿವಾದಿಗಳ ಕುತಂತ್ರಕ್ಕೆ ಬಲಿಯಾಗಿ ಬಹಳ ನೊಂದು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಅವರ ಹಿರಿಯ ಮಗ ಬೆಳ್ಯಪ್ಪನವರು ಎಸ್.ಎಸ್.ಎಲ್.ಸಿ. ವರೆಗೆ ಓದಿ ಚೀಫ್ ಕಮೀಷನರ್‌ರವರ ಕಛೇರಿಯಲ್ಲಿ ಹೆಡ್ ಮುನ್ಸಿ ಆಗಿ ನೇಮಕಗೊಂಡು, ಬಹುಶಃ ಆಗಿನ ಕಾಲದಲ್ಲಿ ಬ್ರಿಟೀಷ್ ಸಾಮ್ರಾಜ್ಯದಲ್ಲಿ ಗೌಡರಲ್ಲಿ ಬಹಳ ದೊಡ್ಡ ಹುದ್ದೆ ದೊರಕಿತ್ತು ಎಂದು ಹೇಳಬಹುದು. ರಾಮಪ್ಪನವರ ಆರ್ಥಿಕ ಮಟ್ಟ ಅಷ್ಟೊಂದು ಉತ್ತಮ ರೀತಿಯಲ್ಲಿ ಇಲ್ಲದಿದ್ದರಿಂದ ಅವರು ತಮ್ಮ ಕೊನೆಯ ಮಗ ಸೋಮಣ್ಣನನ್ನು ಮುಂದಕ್ಕೆ ಓದಿಸುವುದು, ಎರಡನೆ ಮಗ ಮುದ್ದಪ್ಪನು ತನ್ನೊಂದಿಗೆ ಮನೆಯಲ್ಲಿಯೇ ನಿಂತು ಕೃಷಿ ಮಾಡಿಸುವುದು ಎಂದು ತೀರ್ಮಾನಿಸಿದ್ದರಂತೆ. ಈ ಸಂದರ್ಭದಲ್ಲಿ ಮುದ್ದಪ್ಪನವರು ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು 4ನೇ ತರಗತಿವರೆಗೆ ತನ್ನ ದೊಡ್ಡಮ್ಮನ ಮನೆಯಿರುವ ಐವರ್ನಾಡಿನಲ್ಲಿ ಓದಿ ಮುಗಿಸಿದ್ದರು. ರಾಮಪ್ಪನವರ ತೀರ್ಮಾನದಂತೆ ತಮ್ಮ ಸೋಮಣ್ಣನನ್ನು ಬೆಳ್ಯಪ್ಪನವರು ಮಡಿಕೇರಿಗೆ ಕರೆದುಕೊಂಡು ಹೋಗಿ ಕಾನ್ವೆಂಟಿಗೆ ಸೇರಿಸಿದರು ಈ ಸಂದರ್ಭದಲ್ಲಿ ರಾಮಪ್ಪನವರು ವಿಧಿವಶರಾದರು.

ತಂದೆ ತೀರಿಹೋದ ನಂತರ ಮುದ್ದಪ್ಪನವರು ಪೆರಾಜೆ ಗ್ರಾಮದ ಈಗಿರುವ ಕಾಫಿ ತೋಟ ಎಂಬಲ್ಲಿ ಇದ್ದು ಕೃಷಿ ಕೆಲಸ ಕಾರ್ಯಗಳನ್ನು ನೋಡಿಕೊಂಡು ತಂದೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಈ ಅವಧಿಯಲ್ಲಿ ಅವರು ಎಲ್ಲಾ ಕೆಲಸಗಳಲ್ಲಿ ಅನುಭವ ಹೊಂದಿ ಬಡವರ ಕಷ್ಟಕಾರ್ಪಣ್ಯಗಳನ್ನು ಅರ್ಥಮಾಡಿಕೊಂಡರು. ಆದರೆ ಅವರನ್ನು ಒಂದೇ ಒಂದು ಕೊರಗು ಕಾಡುತಿತ್ತು. ಅದೇನೆಂದರೆ ನಾನು ವಿದ್ಯಾಭ್ಯಾಸವನ್ನು ಮಾಡಬೇಕು, ದೊಡ್ಡ ಕೆಲಸಕ್ಕೆ ಸೇರಿ ಬಡ ಜನರಿಗೆ ಅದರಲ್ಲೂ ಗೌಡ ಸಮುದಾಯಕ್ಕೆ ಸಹಾಯ ಮಾಡಬೇಕು, ಗೌಡ ಜನಾಂಗದವರಿಗೆ ಆಗುವ ಅನ್ಯಾಯ, ಅನಾಚಾರಗಳನ್ನು ತಡೆಯಬೇಕು, ತನ್ನ ತಂದೆಯವರಿಗೆ ಆದಂತಹ ಅವಮಾನ ಇತರರಿಗೆ ಆಗಲು ಬಿಡಬಾರದು ಎಂಬ ಮಹದಾಸೆ ಮನಸ್ಸನ್ನು ಹೊತ್ತಿದ್ದರು.

ಒಂದು ದಿನ ಅಣ್ಣ ಬೆಳ್ಯಪ್ಪನವರು ಮಡಿಕೇರಿಯಿಂದ ಬಂದಾಗ ಇವರು ತನ್ನ ಮನಸ್ಸಿನ ಇಂಗಿತವನ್ನು ಹೇಳಿಕೊಂಡರು. ಆಗ ಬೆಳ್ಯಪ್ಪನವರು ತನ್ನ ಆರ್ಥಿಕ ಪರಿಸ್ಥಿತಿಯ ಅಸಹಾಯಕತೆಯನ್ನು ಹೇಳಿ ನೀನು ಇಲ್ಲಿಯೇ ಇರು, ಸೋಮಣ್ಣ ಓದಲಿ, ನನಗೆ ಇಬ್ಬರನ್ನು ಓದಿಸಿ ಕುಟುಂಬದ ಜೀವನ ನಿರ್ವಹಣೆಗೆ ಕಷ್ಟವಾಗಬಹುದು ಎಂದರಂತೆ. ಆಗ ಮುದ್ದಪ್ಪನವರು ನೀನು ನನ್ನನ್ನು ಕರೆದುಕೊಂಡು ಹೋಗದಿದ್ದರೆ ನಾನು ಸಿದ್ದಾಪುರಕ್ಕೆ ಓಡಿಹೋಗಿ ಕಾಫಿಯ ತೋಟದಲ್ಲಿ ಕೂಲಿ ಕೆಲಸ ಮಾಡಿ ಮುಂದಕ್ಕೆ ಓದುತ್ತೇನೆ ಎಂದರಂತೆ. ಈ ಮಾತನ್ನು ಕೇಳಿದ ಬೆಳ್ಯಪ್ಪನವರು ಇನ್ನು ಇವನನ್ನು ತಡೆಯುವುದು ಬೇಡ, ದೇವರಿಷ್ಟದಂತೆ ಆಗಲಿ ಎಂದು ತಮ್ಮನನ್ನು ಸಮಾಧಾನಪಡಿಸಿ, ನಿನ್ನನ್ನು ಮಡಿಕೇರಿಗೆ ಕರೆದುಕೊಂಡು ಹೋಗಿ ಶಾಲೆಗೆ ಸೇರಿಸುತ್ತೇನೆ, ನೀನು ಓದಿ ವಿದ್ಯಾವಂತನಾಗು ಎಂದರಂತೆ. ಅದರಂತೆ ಮಡಿಕೇರಿಗೆ ಕರೆದುಕೊಂಡು ಹೋಗಿ ಕಾನ್ವೆಂಟಿನಲ್ಲಿ 5ನೇ ತರಗತಿಗೆ ಸೇರಿಸಿದರು. ಆಗ ಮುದ್ದಪ್ಪನವರಿಗೆ 18 ವರ್ಷಪ್ರಾಯವಾಗಿತ್ತು. ಇವರು ಬಹಳ ತೀಕ್ಷ್ಣಮತಿಯವರಾಗಿದ್ದು ವಿದ್ಯಾಭ್ಯಾಸದಲ್ಲಿ ಯಶಸ್ಸಿನ ಮೆಟ್ಟಲೇರುತ್ತಾ ಹೋದರು. ಇವರಿಗೆ ಬಹುತೇಕ ತರಗತಿಗಳಲ್ಲಿ ಡಬ್ಬಲ್ ಪ್ರಮೋಷನ್ ದೊರಕಿ ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸವನ್ನು ಅಣ್ಣನ ಸಹಾಯದಿಂದ ಮಾಡಿದರು.

ಈ ಅವಧಿಗೆ ಮುದ್ದಪ್ಪನವರು ಗೌಡ ಜನಾಂಗದಲ್ಲಿ ಹೆಸರುವಾಸಿಯಾಗಿ ಬಿಟ್ಟಿದ್ದರು. ಇವರ ಬುದ್ಧಿವಂತಿಕೆಗೆ, ಧೈರ್ಯಕ್ಕೆ, ನೇರ ನುಡಿಗೆ ಇಡೀ ಗೌಡ ಸಮಾಜವೇ ತಲೆದೂಗಿತ್ತು. ಅದೇ ಸಂದರ್ಭದಲ್ಲಿ ಗೌಡ ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದು ತೀರ್ಮಾನಿಸಿದರು.

[ಮುಂದುವರಿಯುವುದು]

ಕಿರು ಹಾಸ್ಯ ನಾಟಕ

ನನ್ನ ತಿಥಿ ಮಾಡಬೇಕು

[ಜಿಲ್ಲಾಧಿಕಾರಿಯವರ [Collector] ಕಛೇರಿಯಲ್ಲಿ ಆಂಗ್ಲ ಭಾಷೆಯ ಕಲೆಕ್ಟರ್ ಮತ್ತು ಸ್ಥಳೀಯ ಗುಮಾಸ್ತ ಇವರ ಭಾಷೆಯ ಉಚ್ಚಾರಣೆಯಲ್ಲಿ ಆದ ಅವಾಂತರದ ದೃಶ್ಯ]

ಜಿಲ್ಲಾಧಿಕಾರಿಯವರ ಕೊಠಡಿಗೆ ಗುಮಾಸ್ತ ಚಿಣ್ಣಪ್ಪನವರ ಪ್ರವೇಶ.

ಚಿಣ್ಣಪ್ಪ : Good morning Sir, How are you ?

ಕಲೆಕ್ಟರ್ : Yes, who are you ?

ಚಿ : ಸಾರ್ ನಾನು ಇದೇ ಕಛೇರಿಯ ಗುಮಾಸ್ತ—Clerk S D C Chinnappa

ಜಿ : ಓ, ಚಿಣ್ಣಪ್ಪ ನಮ್ಮ ಆಫೀಸಿನ ಗುಮ್ಮ-ಸತ್ತ, ಎರಡನೇ ದರ್ಜೆ ಗಮ್ಮ-ಸತ್ತ, ಏನಪ್ಪಾ ಚಿನ್ನಪ್ಪ ಇಲ್ಲಿ ಎಲ್ಲರೂ ನಂಜಪ್ಪ ಬಿದ್ದಪ್ಪ, ಕುಂಞಪ್ಪ, ಬೆಳ್ಯಯಪ್ಪ ಎಂದು ಹೆಸರಿಟ್ಟಿರುತ್ತಾರೆ. There is no ಕಬ್ಬಿಣಪ್ಪ, ತಾಮ್ರಪ್ಪ, ಅಲ್ಯುಮಿನಿಯಪ್ಪ, ಹಿತ್ತಾಳೆಯಪ್ಪ in this office. ಸರಿ ನೀನು ಯಾಕೆ ಬಂದೆ ನಿನಗೆ ಏನು ಬೇಕು. what do you want ?

ಚಿ : ಸಾರ್, ಇದೆಲ್ಲಾ ಒಂದು ತರಹದ ಹಳೇ ಸಂಪ್ರದಾಯದ ಹೆಸರುಗಳು. ಅದೇ ನಮ್ಮ ಊರಿನ ವಿಶೇಷತೆ.

ಜಿ : ಅದಿರಲಿ, ಮಿ॥ ಚಿನ್ನಪ್ಪಾ what do you want ಹೇಳಿ ಮಿ॥ ಚಿನ್ನಪ್ಪಾ ನೀವು ಹೊಲೆಯವರು (ಒಳ್ಳೆಯವರು) ನಮ್ಮ ಆಫೀಸಿನವರೆಲ್ಲಾ ತುಂಬಾ ಹೊಲೆಯವರು (ಒಳ್ಳೆಯವರು)

ಚಿ : ಸಾರ್ ನಾವು ಗೌಡ ಜಾತಿಯವರು ಹೊಲೆಯವರಲ್ಲ. ಉತ್ತಮ ಮನೆತನಕ್ಕೆ ಸೇರಿದವರು Royal family Sir.

ಜಿ : ಚಿನ್ನಪ್ಪ ನೀವು very good peoples I said ಅಂದರೆ ತುಂಬಾ ಹೊಲೆಯವರು yes, ನಿಮಗೆ ಏನು ಬೇಕು ?

ಚಿ : ಸಾರ್ ನನಗೆ 2 ದಿವಸ ರಜೆ ಬೇಕು 2 days C.L. Sir

ಜಿ : why you want leave ನಿನಗೆ ರಜೆ ಯಾಕೆ ಬೇಕು ?

ಚಿ : ಸಾರ್ ನನ್ನ ಊರಾದ ಕೊಡ್ಲಿಪೇಟೆಗೆ ಹೋಗಬೇಕು. ನನ್ನ ಅಜ್ಜ ಸತ್ತು ಹೋಗಿದ್ದಾರೆ ಅವರ ತಿಥಿ ಮಾಡಬೇಕು.

ಜಿ : ತಿಥಿ ಅಂದರೇನು, ಅದರಲ್ಲಿ ಏನೆಲ್ಲಾ ಮಾಡುತ್ತೀರಿ ?

ಚಿ : ಸಾರ್ ತಿಥಿ ಅಂದರೆ ಅದೊಂದು ಹಬ್ಬ Festival ಸತ್ತವರ ಹೆಸರಿನಲ್ಲಿ ಕುಟುಂಬದವರು ಮತ್ತು ನೆಂಟರಿಷ್ಟರೆಲ್ಲಾ ಸೇರಿ ಮನೆಯನ್ನು ಶುದ್ಧಗೊಳಿಸಿ ಹಲವು ತರಹದ ತಿಂಡಿ ತಿನಸುಗಳನ್ನು ಮಾಡಿ ನಮ್ಮ ಕುಲದೇವರು ಮತ್ತು ದೇವರನ್ನು ಪ್ರಾರ್ಥಿಸಿ prayer ಮಾಡಿ ಅವನ್ನು ಅರ್ಪಿಸಿ ನಾವೆಲ್ಲರೂ ಊಟ ಮಾಡಿ ಆಚರಿಸುವ ಹಬ್ಬ.

ಜಿ : ಸರಿ ಮೇನೇಜರ್‌ಗೆ ಹೇಳು. ನಿನಗೆ ಕೊಡಲಿ ಪೇಟೆಗೆ ಹೋಗಲು ರಜೆ ಕೊಡಲಿ. ಬರುವಾಗ ನನಗೆ ತಿಂಡಿ ತೆಗೆದುಕೊಂಡು ಬಾ.

ವೇದಿಕೆಯಿಂದ ಚಿಣ್ಣಪ್ಪನ ನಿರ್ಗಮನ ಪರದೆಯ ನಂತರ ಚಿಣ್ಣಪ್ಪನ ಹಾಜರಿ.

ಚಿ : ಸಾರ್ ನಾನು ರಜೆ ಮುಗಿಸಿ ತಿಥಿ ಕರ್ಮದ ಹಬ್ಬವನ್ನು ಮಾಡಿ Duty Report ಮಾಡುತ್ತಿದ್ದೇನೆ. ತೆಗೆದುಕೊಳ್ಳಿ ತಿಂಡಿ ತಂದಿರುತ್ತೇನೆ.

ಜಿ : ತಿಂಡಿಗಳನ್ನೆಲ್ಲಾ ಪರಿಶೀಲಿಸಿ (ರವೆ ಉಂಡೆ) ಸುಕ್ಕುಂಡೆಯನ್ನು ತೆಗೆದುಕೊಳ್ಳುತ್ತಾರೆ ಮತ್ತು ತಿಂದು ನೋಡಿ

ಇದೇನು, ಈ ತಿಂಡಿಯ ಹೆಸರೇನು Mr. Chinnappa?

ಚಿ : ಸಾರ್ ಇದರ ಹೆಸರು ಸುಕ್ಕುಂಡೆ. ಇದನ್ನು ನನ್ನ ಹೆಂಡತಿ ತಯಾರಿಸಿದಳು. ಸಾಮಾನ್ಯವಾಗಿ ಇದನ್ನು ಎಳ್ಳುಂಡೆ ಅಥವಾ ಸುಕ್ಕುಂಡೆ. ಎನ್ನುತ್ತಾರೆ.

ಜಿ : ಸುಖ-ರಂಡೆ ಶುಖ ..ರಂಡೆ ಬಹಳ ಚೆನ್ನಾಗಿದೆ ಸುಖ ರಂಡೆ ಬಹಳ ಚೆನ್ನಾಗಿದೆ Very good.

ಚಿ : [ಸಂತೋಷ ವ್ಯಕ್ತಪಡಿಸುವನು ನಗು ಮುಖದಿಂದ ವ್ಯಕ್ತಪಡಿಸುವನು]

ಜಿ : Mr. Chinnappa ನಿನ್ನ ಹೆಂಡತಿ ಒಳ್ಳೆಯ ಶುಖ-ರಂಡೆ ಮಾಡುತ್ತಾಳೆ ಅಲ್ಲವಾ? ಅವಳು ಒಳ್ಳೆಯ ಶುಖ ರಂಡೆ ಮಾ ಡು ತ್ತಾ ಳೆ.

ಕಛೇರಿಯ ಇತರ ಕೊಠಡಿಗಳಿಂದ ನಗುವಿನ ಅಲೆ ಕೇಳಿ ಬರುತ್ತದೆ. ಚಿನ್ನಪ್ಪ ತಲೆ ಕೆರೆಯುತ್ತಾ ನಿಂತಿರುತ್ತಾರೆ.

ಜಿ : Mr. Chinnappa ನಾಳೆಯೇ ನಿನ್ನ ಹೆಂಡತಿಯನ್ನು ಬರಮಾಡು. ಏಕೆಂದರೆ ಅವಳು ಒಳ್ಳೆಯ ಶುಖ ರಂಡೆ ಮಾಡು-ತ್ತಾಳೆ ನೋಡು. ನಾಳೆ ನನ್ನ ತಿಥಿ ಮಾಡಬೇಕು. ಸುಖ-ರಂಡೆ ಮಾಡಿ ಎಲ್ಲರಿಗೂ ಕೊಡಬೇಕು. ಕಚೇರಿಯಲ್ಲಿ ಎಲ್ಲಾ ಗುಮ್ಮ-ಸತ್ತರಿಗೆತಿಳಿಸು. ನಾಳೆ ನನ್ನ ತಿಥಿ ಮಾಡಬೇಕು.

(ಇದನ್ನು ಅಭಿನಯಿಸುವ Collector ಪಾತ್ರದವರ ಇಂಗ್ಲೀಷ್ ಉಚ್ಚಾರಣೆಯಲ್ಲಿ ಈ ಕಿರು ಹಾಸ್ಯ ನಾಟಕದ ಸಾರಾಂಶ ಮತ್ತು ಸ್ವಾರಸ್ಯವನ್ನು ವ್ಯಕ್ತಪಡಿಸುತ್ತದೆ.)

O **ಕುದುಪಜೆ ಬಸಪ್ಪ,** ಶಕ್ತಿ ವರದಿಗಾರ, ಕುಶಾಲನಗರ

ಕೊಡಗಿನ ಗೌಡ ಸಮಾಜಗಳು ಮತ್ತು ಅವುಗಳ ಕಾರ್ಯಕಲಾಪಗಳು

1997-98 ರ ವರ್ಷಗಳಲ್ಲಿ ಕೊಡಗಿನ ಗೌಡ ಜನರಲ್ಲಿ ಹುರುಪಿನ ಸಂಘಟನೆ ಹಾಗೂ ಗೌಡ ಸಂಸ್ಕೃತಿ ವಿಷಯದಲ್ಲಿ ಉತ್ಸಾಹಿ ಚಟುವಟಿಕೆಗಳು ಒಮ್ಮೆಲೇ ಚೇತನಗೊಂಡದನ್ನು ಕಂಡು ಹಲವಾರು ಸ್ಥಳಗಳಲ್ಲಿ ಮಹಿಳಾ ಸಂಘಟನೆ ಹಾಗೂ ಯುವ ಸಂಘಟನೆಗಳಾದುದನ್ನು ಕೇಳಿ ಬಹಳ ಸಂತೋಷವಾಯಿತು. ಕಳೆದು ಹೋದ ಒಂದು ವಸ್ತು ಹುಡುಕಿ ಹುಡುಕಿ ಕೊನೆಗೆ ಸಿಕ್ಕಿದಾಗ ಎಷ್ಟರ ಮಟ್ಟಿಗೆ ಸಂತೋಷವಾಗುತ್ತದೊ ಆ ರೀತಿ ಸಂತೋಷವಾಯಿತು.

ಆದರೆ ಇಂತಹ ಕಾರ್ಯಗಳು ಇನ್ನು ಮುಂದಕ್ಕೂ ವರ್ಷ ವರ್ಷವೂ ನಡೆಯುವುದಕ್ಕೆ ಹಣ ಹೊಂದಿಸಬೇಕು ಹಾಗೂ ಅದರ ಸದ್ವಿನಿಯೋಗವಾಗುವ ದಿಶೆಯಲ್ಲಿ ಜನಾಂಗದ ಮುಖಂಡರು ಅವರಲ್ಲೂ ಬುದ್ಧಿ ಜೀವಿಗಳು ಒಂದೆಡೆ ಸೇರಿ ಚರ್ಚಿಸಿ, ತೀಕ್ಷ್ಣವಾಗಿ ಚಿಂತಿಸಿ ಒಂದು ನಿರ್ಧಾರಕ್ಕೆ ಬರಬೇಕು. ಇದಕ್ಕೆ ಈಗಿನ ಮಡಿಕೇರಿ ಗೌಡ ಸಮಾಜ ಹಾಗೂ ವಿದ್ಯಾಸಂಘದಲ್ಲಿ ತಕ್ಕ ಮಾರ್ಪಾಡು ಮಾಡುವುದು ಅತೀ ಅವಶ್ಯ. ಅವುಗಳೇನೆಂದರೆ ಕೊಡಗಿನ ಗೌಡ ವಿದ್ಯಾಸಂಘ, ಮಡಿಕೇರಿಯ ಗೌಡ ಸಮಾಜಗಳೆರಡೂ ಒಂದೇ ಆಡಳಿತಕ್ಕೆ ಬರಬೇಕು. ಇಲ್ಲಿಯವರೆಗೆ ಕೊಡಗಿನ ಗೌಡರ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಮಾತ್ರ ಸಂಘ ಸ್ಥಾಪನೆಯಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಕೊಡಗಿನ ಕೇಂದ್ರ ಸ್ಥಳವಾದ ಮಡಿಕೇರಿಯಲ್ಲಿ ಒಂದು ವಿದ್ಯಾರ್ಥಿ ಭವನ ಅವಶ್ಯಕವಾಗಿತ್ತು. ಈಗ ಪ್ರತೀ 4 ಗ್ರಾಮಗಳಿಗೊಂದು ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿದ್ದು, ಮಡಿಕೇರಿಗೆ ಬಂದು ಓದುವ ಪರಿಸ್ಥಿತಿ ಇಲ್ಲ. ಈಗಿನ ಸಂಸ್ಥೆಗಳು ಬರೇ ವಿದ್ಯಾಭ್ಯಾಸದ ವಿಷಯದಲ್ಲಿ ಮಾತ್ರ ಸೀಮಿತವಾಗಿರದೆ ಜನಾಂಗದ ಆರ್ಥಿಕ, ಸಾಮಾಜಿಕ ವಿದ್ಯೆ, ಸಂಸ್ಕೃತಿ ವಿಷಯದಲ್ಲೂ ಕಾರ್ಯಕ್ರಮಗಳನ್ನು ತೊಡಗಿಸಿಕೊಳ್ಳಬೇಕಾಗಿದೆ. ಇದಕ್ಕೆಲ್ಲಾ ಹಣ ಬೇಕು. ಪ್ರತೀ ವರ್ಷ ಹಣವನ್ನು ವಸೂಲು ಮಾಡುವುದು ತಲೆ ನೋವಿನ ಕೆಲಸ. ಇದಕ್ಕೆ ಹಣ ಒದಗಿಸಲು ಆಯಾಯ ಸಮಾಜಗಳು ಯಾವ ರೀತಿಯಲ್ಲಿ ಹಣವನ್ನು ಶೇಖರಿಸಬಹುದೆಂಬ ಯೋಜನೆಗಳನ್ನು ಹಾಕಿ ಅದನ್ನು ಕಾರ್ಯಗತ ಮಾಡಬೇಕು. ಉದಾ: ಮಡಿಕೇರಿಯಲ್ಲಿ ಮಡಿಕೇರಿ ಸಮಾಜದ ಒತ್ತಿನಲ್ಲಿರುವ ಖಾಲಿ ಸ್ಥಳಗಳಲ್ಲಿ ಕಟ್ಟಡ ಕಟ್ಟಿ ವ್ಯಾಪಾರದ ಮಳಿಗೆಗಳನ್ನು ಬಾಡಿಗೆಗೆ ಕೊಟ್ಟರೆ ಹಣ ಬರುತ್ತದೆ. ಕಲ್ಯಾಣ ಮಂಟಪದಿಂದಲೂ ಹಣ ಬರುತ್ತದೆ. ಅದೇ ರೀತಿ ಮೂರ್ನಾಡು, ಭಾಗಮಂಡಲ, ಕುಶಾಲನಗರಗಳಲ್ಲೂ ಹಾಗೂ ಇನ್ನಿತರ ಕಡೆಗಳಲ್ಲಿರುವ ಸಮಾಜಗಳಲ್ಲೂ ಮಾಡಬಹುದು. ಇದಕ್ಕೆ ಉದಾಹರಣೆ ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು ಕಟ್ಟಿಸಿದ ಕಟ್ಟಡವನ್ನು ಬಾಡಿಗೆಗೆ ಕೊಡುವ ಮೂಲಕ ಸುಮಾರು 18–20 ಸಾವಿರ ರೂಪಾಯಿ ಪ್ರತೀ ತಿಂಗಳು ಬಾಡಿಗೆ ಬರುವಂತೆ ಮಾಡಿದೆ. ಇದರ ಹಣದಿಂದ ಸಮಾಜದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ವ್ಯವಸ್ಥಾಪಕರನ್ನು ನೇಮಕ ಮಾಡಲಾಗಿದೆ. ಅಲ್ಲದೆ ಇಲ್ಲಿನ ಸಮಾಜದಲ್ಲಿ ಹೊಲಿಗೆ ತರಬೇತಿ ಶಾಲೆಯನ್ನು ತೆರೆದು ತರಬೇತಿಕೊಡುತ್ತಿದ್ದಾರೆ. ಅಲ್ಲದೆ ಗೌಡ ಸಮಾಜದ ಮುಖಾಂತರ ಒಂದು ನ್ಯಾಯಬೆಲೆ ಅಂಗಡಿಯನ್ನು ತೆರೆದು ಅದರ ಮುಖಾಂತರ ಬರುವ ಲಾಭದಲ್ಲಿ ಒಂದಂಶವನ್ನು ಸಮಾಜಕ್ಕೆ ಬರುವಂತೆ ಮಾಡಿದೆ. ಮಹಿಳೆಯರಿಗೆ ಉಪ್ಪಿನಕಾಯಿ ತಯಾರಿಸುವ, ಹಪ್ಪಳ ಸಂಡಿಗೆ ತಯಾರು ಮಾಡುವ, ಕಂಪ್ಯೂಟರ್ ತರಬೇತಿ ನೀಡುವ ಯೋಜನೆಯನ್ನು, ಐ.ಎ.ಎಸ್., ಕೆ.ಎ.ಎಸ್. ಮತ್ತು ಇನ್ನಿತರ ಪರೀಕ್ಷೆಗಳಿಗೆ ಕೂರಲು ಬೇಕಾಗುವ ಪುಸ್ತಕಗಳ ಗ್ರಂಥಾಲಯವನ್ನು ಸ್ಥಾಪಿಸುವ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅಲ್ಲದೆ 22 ಎಕ್ರೆ ಸ್ಥಳದಲ್ಲಿ 240 ಜನರಿಗೆ ನಿವೇಶನಗಳನ್ನು ಹಂಚಲಾಗಿದೆ. ಅದೇ ರೀತಿ ಮಂಗಳೂರಿನ ಗೌಡ ಯಾನೆ ಒಕ್ಕಲಿಗರ ಸಂಘದ ಕಟ್ಟಡದಿಂದ ತಿಂಗಳಿಗೆ 40,000ದಷ್ಟು ವರಮಾನ ಬರುತ್ತಿದೆ.

ಈ ರೀತಿ ಹಣ ಸಂಪಾದನೆ ಮಾಡುವ ದಾರಿಯನ್ನು, ಬಂದ ಹಣವನ್ನು ಪ್ರಾಮಾಣಿಕವಾಗಿ ಖರ್ಚುಮಾಡುವ ಏರ್ಪಾಡು ಆಗಬೇಕು.

ನನ್ನ ಅಭಿಪ್ರಾಯದ ಪ್ರಕಾರ ಮಡಿಕೇರಿಯಲ್ಲಿರುವ ಗೌಡ ಸಮಾಜ ಮತ್ತು ವಿದ್ಯಾ ಸಂಘವನ್ನು ವಿಲೀನಕರಿಸಿ ಒಂದೇ ಆಡಳಿತ ವ್ಯಾಪ್ತಿಗೆ ತರುವುದು ಉತ್ತಮ. ಎರಡೂ ಸಂಸ್ಥೆಗಳು ಸೊಸೈಟಿಗಳ ನೋಂದಾವಣೆ ಕಾಯ್ದೆ ಪ್ರಕಾರ ವಿಲೀನಕರಣಕ್ಕೆ ಅವಕಾಶವಿದೆ. ವಿದ್ಯಾ ಸಂಘವನ್ನು ಗೌಡ ಸಮಾಜದೊಡನೆ ವಿಲೀನ ಮಾಡುವುದು ಒಳ್ಳೆಯದು. ಏಕೆಂದರೆ, ಸಮಾಜದ ಬೈಲಾ ತಿದ್ದುಪಡಿ ಮಾಡಿ ಅದರಲ್ಲಿ ವಿದ್ಯಾಭ್ಯಾಸದ ವಿಷಯ ಅಳವಡಿಸಿದರೆ ಆಯಿತು. ಈ ರೀತಿ ಗೌಡ ಸಮಾಜದ ಬೈಲಾ ತಿದ್ದುಪಡಿ ಮಾಡುವಾಗ ಕೊಡಗು, ಮೈಸೂರು, ಬೆಂಗಳೂರಿನಲ್ಲಿರುವ ಸಮಾಜಗಳು ತಮ್ಮ ಪ್ರತಿನಿಧಿಗಳನ್ನು ಮಡಿಕೇರಿಯ ಗೌಡ ಸಮಾಜಕ್ಕೆ ಕಳುಹಿಸಿಕೊಡುವ ಮೂಲಕ ಮಡಿಕೇರಿಯ ಗೌಡ ಸಮಾಜಕ್ಕೂ, ಬೇರೆ ಬೇರೆ ಕಡೆ ಇರುವ ಸಮಾಜಗಳಿಗೂ ಹೊಂದಾಣಿಕೆ ಇರುವುದಕ್ಕೆ ಸಾಧ್ಯ. ಅದೇ ರೀತಿ ಇತ್ತೀಚೆಗೆ ಸ್ಥಾಪಿಸಿರುವ ಮಹಿಳಾ ಮಂಡಳಿಗಳೂ, ಯುವಕ ಸಂಘಗಳೂ ಮತ್ತು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯೂ ಸಹ ಈ ಮಡಿಕೇರಿಯ ಗೌಡ ಸಮಾಜದ ಕಾರ್ಯವ್ಯಾಪ್ತಿಗೆ ಬರುವಂತೆ ಮಾಡಬೇಕು. ಮೇಲೆ ಹೇಳಿದ ರೀತಿಯಲ್ಲಿ ಒಂದಕ್ಕೊಂದು

ಹಾಳು ಹಂಪೆ

ಹಕ್ಕ-ಬುಕ್ಕರಾಳಿದ ಅಂದಿನ ವಿಜಯನಗರ, ಇಂದು ಹಾಳುಹಂಪೆ
ಎತ್ತ ನೋಡಿದರತ್ತ ಕಾಣುವುದು ತುಂಗಭದ್ರೆಯ ದಡದಿ
ಕಲ್ಲು ಬಂಡೆಗಳ ನಡುವೆ ಹಾಳು ಹಂಪೆ
ಅಲ್ಲಿ ಕಾಣುವುದು ನೋಡಿ ರುಂಡ ಕತ್ತರಿಸಿದ, ಮುಂಡ ಮುರಿದ
ಕೈಯಿಲ್ಲದ, ಕಾಲಿಲ್ಲದ ದೇವರು
ಪೂಜೆ ಪುರಸ್ಕಾರಗಳಿಲ್ಲ, ಮಂಗಳ ವಾದ್ಯಗಳ ಸದ್ದಿಲ್ಲ
ಕಾಣುವುದು ಅಲ್ಲೊಂದು ಇಲ್ಲೊಂದು ಜನರ ಗುಂಪು
ಜನರ ನಿಟ್ಟುಸಿರು, ನಿಟ್ಟುಸಿರೊಂದಿಗೆ ಯಕ್ಷ ಪ್ರಶ್ನೆ
ಏಕೆ ಹೀಗಾಯಿತು, ಯಾರಿಂದ ಹೀಗಾಯ್ತು.

ಅಲ್ಲಿ ಕಾಣುವುದು ರಾಣಿ ಮಹಾರಾಣಿಯರ ಸ್ನಾನ ಗೃಹ
ವಾಹ್, ಅದು ಎಷ್ಟೊಂದು ಸುಂದರ, ಇಂದಿನ ಆಧುನಿಕತೆಗೆ
ಬಹಳಷ್ಟು ಹತ್ತಿರ, ಅಂದು ನಡೆದಿತ್ತು ರಾಣಿ ಮಹಾರಾಣಿಯರ
ಜಲಕ್ರೀಡೆ, ಇಂದು ಕೊಳದಲ್ಲಿ ತುಂಗಭದ್ರೆಯ ನೀರಿಲ್ಲ
ರಾಣಿಯರ ಹಿಂಡಿಲ್ಲ, ಆದರೂ ಕಾಯುತಿಹರು ಎಂದಾದರೊಂದು
ದಿನ ಪಡೆವೆ ನನ್ನ ಗತಕಾಲದ ವೈಭವ.

ತಾವರೆಯ ಆಕಾರದ ಲೋಟಸ್-ಮಹಲ್
ಯಾವ ಕವಿಯ ಕಲ್ಪನೆಯೋ, ಯಾವ ಶಿಲ್ಪಿಯ ಪರಕಲ್ಪನೆಯೋ
ಸರಿಸಾಟಿ ಎನಗಿಲ್ಲ, ಎನಗಿಂತ ಬೇರೆ ಇಲ್ಲವೇ ಇಲ್ಲ
ಎಂದಂದು ಭೀಗುತ್ತಿದ್ದ ಲೋಟಸ್-ಮಹಲ್ಇಂದು ನಿಂತಿಹದು
ಗತಕಾಲ ಕೈಸಿರಿಯ ಮೆಲುಕು ಹಾಕುತ್ತಾ.........
ಯೌವ್ವನವ ಕಳಕೊಂಡು, ಯೌವ್ವನವ ನೆನೆಯುವ ಹೆಣ್ಣಿನಂತೆ
ವಿಠಲಾ ನಿನ್ನ ಸ್ಥಾನದಲ್ಲಿ ಗೆಜ್ಜೆಗಳ ಸದ್ದಿಲ್ಲ
ಯೌವ್ವನೆಯರ ನೃತ್ಯ ಅಲ್ಲಿಲ್ಲ
ಆದರೆ ಕಂಬ ಕಂಬದಲ್ಲಿ ಸ್ವಲ್ಪ ಉಳಿದಿದೆ ಸರಿಗಮ ಪದನಿಸ
ಶಿಲ್ಪಿಯ ಕಲ್ಪನೆ ಅಲ್ಲಿದೆ, ಆದರೆ ಅರಸನ ಸಿರಿ ಅಲ್ಲಿಲ್ಲ
ಹಿಂದೊಮ್ಮೆ ಮೊಳಗುತ್ತಿದ್ದ ಸಂಗೀತದಾಲಾಪ ಇಂದಿಲ್ಲ
ನಿನ್ನ ಕಲ್ಲಿನ ರಥ ಕಣ್ಣೀರು ಗರೆಯುತ್ತಿದೆ.

ನಿನ್ನ ಕಲ್ಯಾಣ ಮಂಟಪ ಬರಿದಾಗಿ ನಿಂತಿದೆ
ಅಂದು ಮೊಳಗುತ್ತಿತ್ತಂತೆ ಶಾಸ್ತ್ರೀಯ ಸಂಗೀತದೈಸಿರಿಯು
ಗಾವುದ ದೂರಕೆ ಕೇಳುತ್ತಿತ್ತಂತೆ ಸಂಗೀತದ ಸವಿಯು
ಅಂತ ಕತೆಗಳ ನಡುವೆ ನಿಂತಿದೆ ಸ್ಮಶಾನ ಮೌನ.

ಮುರಿದು ಬಿದ್ದಿದೆ ನೋಡಿ ರಾಣಿಯರ ಅರಮನೆ
ಟಂಕ ಶಾಲೆಯಲಿ ಇಲ್ಲ ಚಿನ್ನ-ಬೆಳ್ಳಿ ನಾಣ್ಯದ ಝಣ ಝಣ
ಗತಕಾಲದ ವೈಭವವ ನೆನೆಯುತ ಅಸಾಹಾಯಕತೆಯ
ನೈಜ ರೂಪದಲಿ
ನಿಂತಿದೆ ನೋಡಿ ಪಟ್ಟಾಭಿರಾಮ, ಲಕ್ಷ್ಮೀ ನರಸಿಂಹ
ಸಾಸುವೆಕಾಳು ಗಣಪತಿಯ ಆಸ್ಥಾನ
ಪೂಜೆ ಪುರಸ್ಕಾರಗಳಿಲ್ಲ, ಮಂಗಳ ವಾದ್ಯದ ಧ್ವನಿ ಅಲ್ಲಿಲ್ಲ.
ಕೋಟೆ ಕೊತ್ತಲು ಮುರಿದು ಬಿದ್ದು ಆಚರಿಸುತ್ತದೆ ಸ್ಮಶಾನ
ಮೌನ

ಮನಸಿನಲಿ ಮರುಗುತ್ತಿದೆ ಪರಕೀಯರಿಗೇಕಿತ್ತು ನಮ್ಮ
ಮೇಲೆ ಆಕ್ರೋಶ
ಕಾಲಕೋಶದಲ್ಲಿ ಸೇರಿಹೋದರು ವೀರರು,ಧೀರರೂ, ಪರಕೀಯರು
ಲೂಟಿ ಮಾಡಿದರು, ಹಾಳುಗೆಡವಿದರು ಆ ಸುಂದರ
ನಗರ ವಿಜಯನಗರವ
ಏಕೆ ಹೀಗಾಯ್ತು, ಯಾರಿಂದ ಹೀಗಾಯ್ತು ಎಂಬ ನಿಟ್ಟುಸಿರಲಿ
ನಿಂತಿಹುದು 'ಹಾಳು ಹಂಪೆ'

● ಚೆಟ್ಟಿಮಾಡ ತನುಜಾ ರವೀಂದ್ರ
W/o. ಸಿ. ಎ. ರವೀಂದ್ರ
ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್, ಭದ್ರಾವತಿ.

(ಹಿಂದಿನ ಪುಟದಿಂದ ಮುಂದುವರಿದುದು)

ಸಮಾಜ ಅಥವಾ ಸಂಸ್ಥೆಗಳಿಗೆ ಸಂಬಂಧ ಕಲ್ಪಿಸಿದರೆ ಹೊಂದಾಣಿಕೆಯಾಗಲು ಸಾಧ್ಯ. ಇಲ್ಲದಿದ್ದರೆ ಏರ್ಪಡಿಸುವ ಒಂದೊಂದು ಕಾರ್ಯಕ್ರಮ ಹಾಗೂ ಕೆಲಸಗಳಿಗೆ ಘರ್ಷಣೆಯಾಗಬಹುದು. ಈ ರೀತಿಯಾದರೆ ಇವುಗಳು ಮಾಡುವ ಕೆಲಸ ಕಾರ್ಯಗಳಿಗೆ ತೊಂದರೆಯಾಗಿ ವೈಮನಸ್ಸು ಬೆಳೆಯಲು ಕಾರಣವಾಗಬಹುದು. ಈ ರೀತಿ ಮಾಡಿದರೆ ನಮ್ಮ ಸಮಾಜದ ಯುವಕ, ಯುವತಿಯರ ಉದ್ಯೋಗವಕಾಶದ ಏರ್ಪಾಡು ಮಾಡಲು ಸಾಧ್ಯವಾಗುತ್ತದೆ, ನಮ್ಮ ಯುವಕ ಯುವತಿಯರಿಗೆ ತಕ್ಕ ಉದ್ಯೋಗಗಳ ಮಾರ್ಗದರ್ಶನ ಹಾಗೂ ಅವರು ಕುಳಿತುಕೊಳ್ಳುವ ಪರೀಕ್ಷೆಗಳಿಗೆ ತಯಾರು ಮಾಡಲು [ಐ.ಎ.ಎಸ್., ಕೆ.ಎ.ಎಸ್. ಮತ್ತು ಇನ್ನಿತರ ಪರೀಕ್ಷೆಗಳು] ತಕ್ಕ ಮಾರ್ಗದರ್ಶನ ಹಾಗೂ ಅವರುಗಳು ಓದುವುದಕ್ಕಾಗಿ ಒಂದು ಗ್ರಂಥಾಲಯವನ್ನು ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಿದರೆ ಎಷ್ಟೋ ಸಹಾಯ ಮಾಡಿದಂತಾಗುವುದು. ಈ ರೀತಿ ಆರ್ಥಿಕ, ಸಾಂಸ್ಕೃತಿಕ-ವಿದ್ಯೆ ಕೈಗಾರಿಕೆಗಳಿಗೆ ಉತ್ತೇಜನ ನೀಡಿದರೆ ನಮ್ಮ ಸಮಾಜ ಎಲ್ಲಾ ವಿಧದಲ್ಲಿ ಮುಂದುವರಿಯಬಹುದೆಂದು ನನ್ನ ಸಲಹೆ.

○ ಪ್ರೊ॥ ಪೂಜಾರಿ ಮೊಣ್ಣಪ್ಪ, ಬೆಂಗಳೂರು.

[ಇವುಗಳ ಬಗ್ಗೆ ಸಮಾಜದ ಹಿತಚಿಂತಕರಿಂದ ಅಭಿಪ್ರಾಯವನ್ನು ತಿಳಿಯಬಯಸುತ್ತದೆ] – ಸಂಪಾದಕಿ

ಶ್ರೇಷ್ಠ ಮಹಿಳಾ ಉದ್ಯಮಿ ಪ್ರಶಸ್ತಿಗಳಿಸಿದ ಮಾಲತಿ ಹೆಬ್ಬಾರ್

ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಮಹಿಳೆಯರು ದಿಟ್ಟ ಹೆಜ್ಜೆಯಿಟ್ಟರೆ ಗಮನಾರ್ಹ ಸಾಧನೆ ಮಾಡಬಲ್ಲರು ಎಂಬುದಕ್ಕೆ ಮಂಡ್ಯದ ವೈಭವ ದರ್ಶಿನಿಯ ಶ್ರೀಮತಿ ಮಾಲತಿ ಹೆಬ್ಬಾರ್ ಉತ್ತಮ ನಿದರ್ಶನವಾಗಿದ್ದಾರೆ.

ಸಂಸಾರ ರಥ ನಿಭಾಯಿಸಲು ಹೊಟೇಲ್ ಉದ್ಯಮದಲ್ಲಿ ತೊಡಗಿ ತಮ್ಮ ಅವಿರತ ಶ್ರಮ ಹಾಗೂ ಪ್ರಾಮಾಣಿಕ ಕಳಕಳಿಯಿಂದ ದುಡಿದಿದ್ದರಿಂದ ದಕ್ಷಿಣ ಭಾರತದಲ್ಲೇ ಶ್ರೇಷ್ಠ ಮಹಿಳಾ ಉದ್ಯಮಿ ಎಂಬ ಪುರಸ್ಕಾರವನ್ನು ಇನ್‌ಸ್ಟಿಟ್ಯೂಟ್ ಆಫ್ ಮಾರ್ಕೆಟಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಮತ್ತು ನಬಾರ್ಡ್ ಸಂಸ್ಥೆಯಿಂದ ಪಡೆಯುವ ಮೂಲಕ ಇಡೀ ಮಹಿಳಾ ವರ್ಗಕ್ಕೆ ಕೀರ್ತಿ ತಂದಿದ್ದಾರೆ.

ಮಂಡ್ಯ ನಗರದ ಪ್ರಮುಖ ಬಂದೀಗೌಡ ಬಡಾವಣೆಯಲ್ಲಿ ಕಳೆದ ಐದು ವರ್ಷಗಳಿಂದ ಸಂಪೂರ್ಣ ಮಹಿಳಾ ಕೆಲಸಗಾರರನ್ನೇ ಇಟ್ಟುಕೊಂಡು ವೈಭವ ದರ್ಶಿನಿ ಹೆಸರಿನ ಹೊಟೇಲ್ ಉದ್ಯಮದಲ್ಲಿ ನಿರತರಾಗಿರುವ ಎಸ್. ಮಾಲತಿ ಹೆಬ್ಬಾರ್ ಇಂದು ರಾಜ್ಯದಲ್ಲೇ ಹೊಸ ಶಕ್ತಿಯೊಂದನ್ನು ಹುಟ್ಟುಹಾಕಿದ್ದಾರೆ.

ಕಾಯಕವೇ ಕೈಲಾಸ ಸೂತ್ರದೊಡನೆ ಸಂಸಾರ ನಿಭಾಯಿಸಿಕೊಂಡು ಹೊಟೇಲ್ ಉದ್ಯಮದಲ್ಲಿ ಯಶಸ್ವಿಯಾಗಿರುವ ಇವರು ಈ ಕ್ಷೇತ್ರದಲ್ಲಿ ಕ್ರಮಿಸಿದ ದಾರಿ ಸುಗಮವೇನಲ್ಲ.

ಜೀವನ ನಿರ್ವಹಣೆಗೆ ಕುಟುಂಬದ ಯಜಮಾನ ಎಸ್. ಹರಿಹರ ಹೆಬ್ಬಾರ್ ನಡೆಸುತ್ತಿದ್ದ ಉದ್ಯಮ ಕೈಕೊಟ್ಟಾಗ ಎದೆಗುಂದದೆ ತಾವೇ ಈ ಕ್ಷೇತ್ರಕ್ಕಿಳಿದ ಮಾಲತಿ ಹೆಬ್ಬಾರ್ ಮೊದಲು ಜೊತೆಗೂಡಿಸಿ ಕೊಂಡಿದ್ದು ತಮ್ಮ ಆಪ್ತ ಸ್ನೇಹಿತೆ ಶ್ರೀಮತಿ ವಿಜಯ ಜಗನ್ನಾಥ್ ಅವರನ್ನು ಸಮಾನ ಮನೋಭಾವದ ಇಬ್ಬರು ಹೊಟೇಲ್ ಉದ್ಯಮವನ್ನು ಆರಂಭಿಸಲು ನಿರ್ಧರಿಸಿದರು.

ಹೊಟೇಲ್‌ವೊಂದನ್ನು ಸ್ಥಾಪಿಸುವುದನ್ನು ನಿಶ್ಚಯಿಸಿದ್ದಾಯ್ತು. ಆದರೆ ಬೆಂಗಳೂರಿನಲ್ಲಿರುವ ದರ್ಶಿನಿಗಳನ್ನೆಲ್ಲಾ ದರ್ಶನ



ಶ್ರೀಮತಿ ಮಾಲತಿ ಹೆಬ್ಬಾರ್

ಮಾಡಿಕೊಂಡು ಬಂದ ಇವರಿಗೆ ಕೈಯಲ್ಲಿ ಚಿಕ್ಕಾಸೂ ಇರಲಿಲ್ಲ. ಬ್ಯಾಂಕ್‌ಗಳಿಂದ ಹಣಕಾಸು ಸಹಾಯಕ್ಕಾಗಿ ಅಲೆದ ಇವರಿಗೆ ಯಾವ ಬ್ಯಾಂಕು ಕೂಡ ಸಾಲ ನೀಡುವ ಸೌಜನ್ಯವನ್ನು ತೋರಲಿಲ್ಲ. ಹೊಟೇಲ್ ಶುರು ಮಾಡಲೇಬೇಕೆಂಬ ಛಲ ಹೊತ್ತ ಇವರಿಗೆ ತಮ್ಮ ಮೈಮೇಲಿದ್ದ ಆಭರಣಗಳೇ ನೆರವಾದವು.

ಆಭರಣಗಳನ್ನು ಮಾರಿ 60 ಸಾವಿರ ರೂ ಸಂಗ್ರಹಿಸಿದ ಇವರು ನವೆಂಬರ್ 93ರ ವಿಜಯದಶಮಿ ದಿನದಂದು ಆರು ಜನ ಮಹಿಳಾ ಸಹಾಯಕರೊಂದಿಗೆ ವೈಭವ ದರ್ಶಿನಿಯನ್ನಾರಂಭಿಸಿದರು. ಮಂಡ್ಯ ನಗರದಲ್ಲಿ ಕ್ಯಾಂಟೀನ್‌ಗಳು ಅಧಿಕ ಸಂಖ್ಯೆಗಳಲ್ಲಿ ಇದ್ದರೂ ಇಲ್ಲಿಯ ಗ್ರಾಹಕರು ದರ್ಶಿನಿಯಲ್ಲಿ ನೀಡುತ್ತಿದ್ದ ಶುಚಿರುಚಿಯಾದ ತಿಂಡಿತಿನಿಸುಗಳಿಂದ ಆಕರ್ಷಿತರಾಗಿದ್ದರಿಂದ ವ್ಯಾಪಾರ ಲಾಭದಾಯಕವಾಗಿತ್ತು.

ಈ ದರ್ಶಿನಿಯಲ್ಲಿ ಚಟ್ನಿ ರುಬ್ಬುವುದರಿಂದ ಹಿಡಿದು ಲೋಟ ತೊಳೆಯುವವರೆಗೂ ಮಹಿಳಾ ಕೆಲಸಗಾರರೇ ಕಾರ್ಯ ನಿರ್ವಹಿಸುತ್ತಿದ್ದು ಹೋಟೆಲ್ ಸ್ವಚ್ಛತೆಯಿಂದ ಕೂಡಿದ್ದರಿಂದ ದರ್ಶಿನಿ ಹುಡಿಕಿಕೊಂಡು ಜನ ಬರಲಾರಂಭಿಸಿದರು.

ಜಿಲ್ಲೆಯ ಹೊಟೇಲ್ ಉದ್ಯಮದಲ್ಲೇ ಮಹಿಳೆಯರೇ ಕಾರ್ಯ ನಿರ್ವಹಿಸುವ ಪ್ರಥಮ ಹೊಟೇಲ್ ಎನಿಸಿಕೊಂಡಿದ್ದ ದರ್ಶಿನಿ ದಿನೇ ದಿನೇ ಇವರ ಸರಳತೆ, ಉತ್ತಮ ತಿಂಡಿ ತಿನಿಸುಗಳ ತಯಾರಿಕೆ ಹಾಗೂ ಸೌಜನ್ಯದ ಸೇವೆಯಿಂದಾಗಿ ಜನಪ್ರಿಯವಾಗತೊಡಗಿತು. ಗ್ರಾಹಕರು ಹೆಚ್ಚಾಗುತ್ತಿದ್ದಂತೆ ವೈಭವ ದರ್ಶಿನಿಯನ್ನು ಸ್ವಲ್ಪ ಮಟ್ಟಿಗೆ ವಿಸ್ತರಿಸಿಕೊಂಡ ಮಾಲತಿ ಹೆಬ್ಬಾರ್ ಅಲ್ಪ ಕಾಲದಲ್ಲೇ ನಗರದ ಮನೆ ಮಾತಾದರು.

ಸುಮಾರು ಎರಡು ವರ್ಷಗಳ ಕಾಲ ಜೊತೆಯಾಗಿದ್ದ ಸ್ನೇಹಿತೆ ವಿಜಯ ಮಂಡ್ಯದಿಂದ ವರ್ಗಾವಣೆಯಾದ ನಂತರ ಒಂಟಿಯಾಗೇ ದರ್ಶಿನಿ ನಡೆಸುತ್ತಿರುವ ಮಾಲತಿ ಹೆಬ್ಬಾರ್ ಅವರ ಸಾಧನೆಗಳನ್ನು ಸಂಘ ಸಂಸ್ಥೆಗಳು ಗುರುತಿಸತೊಡಗಿದವು ಮೈಸೂರಿನಲ್ಲಿ ರೂಟ್ ಸೆಟ್ ಸಂಸ್ಥೆಯಿಂದ ಸನ್ಮಾನ ಕೂಡ ನಡೆಯಿತು.

ಶ್ರೀ ವೀರೇಂದ್ರ ಹೆಗ್ಗಡೆ ಸಿಂಡಿಕೇಟ್ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕ್‌ಗಳ ಸಂಯುಕ್ತಾಶ್ರಯದಲ್ಲಿ ನಡೆಯುತ್ತಿರುವ ಮೈಸೂರಿನ ರೂಟ್‌ಸೆಟ್ ಸಂಸ್ಥೆ ಇವರ ಸಾಧನೆ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿ ಸನ್ಮಾನಿಸಿದ ನಂತರ ದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಮಾರ್ಕೆಟಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಮತ್ತು ನಬಾರ್ಡ್ ಸಂಸ್ಥೆ ಇವರನ್ನು ಗುರುತಿಸಿ ಆಗಸ್ಟ್ 1997ರ 14ರಂದು ದೆಹಲಿಯಲ್ಲಿ ದಕ್ಷಿಣ ಭಾರತದ ಶ್ರೇಷ್ಠ ಉದ್ಯಮಿ ಎಂದು ಪುರಸ್ಕರಿಸಿ ಪ್ರಶಸ್ತಿ ಹಾಗೂ 5000ರೂ. ನಗದು ನೀಡಿ ಸನ್ಮಾನಿಸಿತು. ರಾಷ್ಟ್ರೀಯ ಕೃಷಿ ಬ್ಯಾಂಕಿನ ಅಧ್ಯಕ್ಷ ಕೊಟ್ಟಯ್ಯ ಇವರಿಗೆ ಪ್ರಶಸ್ತಿ ಪ್ರದಾನ ಮಾಡಿ ಇವರ ಸೇವೆಯನ್ನು ಶ್ಲಾಘಿಸಿದರು.

ಇವರ ಉದ್ಯಮ ಯಶಸ್ವಿಯಾಗುತ್ತಿದ್ದಂತೆ ಬ್ಯಾಂಕ್‌ಗಳು ನಾಮುಂದು ತಾಮುಂದು ಎನ್ನುವಂತೆ ಸಾಲದ ಸೌಲಭ್ಯ ನೀಡಲು

(11ನೇ ಪುಟ ನೋಡಿ)

ಆರೋಗ್ಯ ಚಿಂತನ

ಕಣ್ಣುಗಳ ಆರೋಗ್ಯ ರಕ್ಷಣೆ

ಪರಿಚಯ : ಲೇಖಕ ಡಾ॥ ಯು. ಎಸ್. ಪ್ರವೀಣ, ಮದೆಗ್ರಾಮದ ನಿವೃತ್ತ ಶಿಕ್ಷಕ ನೆರಿಯನ ಟಿ. ಸೋಮಯ್ಯ ಹಾಗೂ ಸರಸ್ವತಿಯವರ ಕೊನೆಯ ಪುತ್ರ. ಅಣ್ಣ ಡಾ॥ ಎನ್. ಎಸ್. ನವೀನ್ ಸಿದ್ಧಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಕ್ಕ ದೇವಿ ಪ್ರಸಾದಿನಿ ಕೆ. ಆರ್. ನಗರದಲ್ಲಿ ಸಿ. ಡಿ. ವಿ.ಒ. ಆಗಿರುವ ರಾಧಾಕೃಷ್ಣ ಮಡಪ್ಪಾಡಿಯವರ ಪತ್ನಿ.

ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎಂ. ಬಿ. ಬಿ. ಎಸ್. ಪದವಿ ಪಡೆದು ನಂತರ ಮಹಾರಾಷ್ಟ್ರದ ಔರಂಗಬಾದ್ ಯುನಿವರ್ಸಿಟಿಯಲ್ಲಿ ಎಂ. ಡಿ. [ಪ್ರಸೂತಿ ಹಾಗೂ ಸ್ತ್ರೀರೋಗ] ಕೋರ್ಸನ್ನು 1998 ಮೇಯಲ್ಲಿ ಪೂರ್ಣಗೊಳಿಸಿರುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಅತಿಯಾದ ಆಸಕ್ತಿ ಪ್ರೇಮ ಇರುವ ಇವರಿಗೆ ಶಾಲಾ ಕಾಲೇಜುಗಳಲ್ಲಿ ಕನ್ನಡ ಪ್ರಬಂಧ, ಭಾಷಣ ಸ್ಪರ್ಧೆಗಳಲ್ಲಿ ಹಲವಾರು ಪ್ರಶಸ್ತಿಗಳು ಬಂದಿವೆ. ಇವರ ಹಲವಾರು ವೈದ್ಯಕೀಯ ಲೇಖನಗಳು ಈ ಹಿಂದೆ ಕೊಡಗಿನ 'ಶಕ್ತಿ' ಪತ್ರಿಕೆಯ 'ಆರೋಗ್ಯಭಾಗ್ಯ' ಅಂಕಣದಲ್ಲಿ ಮೂಡಿಬಂದಿದೆ.

ನಮ್ಮ ಅರೆಭಾಷಾ ಸಾರಸ್ವತ ಲೋಕಕ್ಕೆ ಇವರ ಪಾದಾರ್ಪಣೆಯಿಂದ ಮುಂದೆ ಶಕ್ತಿಯುತವಾಗಿ ಬೆಳೆಯಲೆಂದು ಆಶಿಸೋಣವೇ ?

ಕಣ್ಣು ಶರೀರದ ಅತ್ಯಂತ ಪ್ರಮುಖವಾದ ಅಂಗಗಳಲ್ಲಿ ಒಂದಾಗಿದೆ. ಕಣ್ಣಿನ ಆರೋಗ್ಯ ರಕ್ಷಣೆಗಾಗಿ ಹಲವಾರು ಅಂಶಗಳನ್ನು ಅನುಸಂಸಬೇಕು.

1. ಕಣ್ಣುಗಳ ಆರೋಗ್ಯಕ್ಕಾಗಿ 'ಎ' ಜೀವಸತ್ವದ (Vitamin–A) ಆಹಾರವನ್ನು ಯಥೇಚ್ಛವಾಗಿ ಸೇವಿಸಬೇಕು. ಹಸಿರು ಸೊಪ್ಪು, ತರಕಾರಿಗಳು, ಹಳದಿ ಹಾಗೂ ಕೆಂಪು ಬಣ್ಣದ ಹಣ್ಣುಗಳು, ಹಾಲು, ಮೊಟ್ಟೆ, ಮೀನು, ಯಕೃತ್ ಹೆಚ್ಚು ವಿಟಮಿನ್ 'ಎ' ಹೊಂದಿರುತ್ತವೆ.

2. ಓದುವಾಗ ಬೆಳಕು ಪುಸ್ತಕದ ಮೇಲೆ ನೇರವಾಗಿ ಬೀಳಬಾರದು. ಧೂಳು ಮತ್ತು ಅತಿ ಪ್ರಕಾಶಮಾನವಾದ ಬೆಳಕಿಗೆ ಕಣ್ಣುಗಳನ್ನೊಡ್ಡಬಾರದು. ದೂರದರ್ಶನ, ಚಲನಚಿತ್ರವನ್ನು ಹತ್ತಿರದಿಂದ ದೀರ್ಘ ಕಾಲ ನೋಡುವುದರಿಂದ ಕಣ್ಣಿಗೆ ಹಾನಿಯಿದೆ.

3. ಕಾಡಿಗೆ, ಕಣ್ಣುಕಪ್ಪುಗಳನ್ನು ರೆಪ್ಪೆಗಳಿಗೆ ಹಚ್ಚಿಕೊಳ್ಳಬಾರದು.

4. ಕಣ್ಣಿಗೆ ಏನಾದರೂ ಧೂಳುಬಿದ್ದಾಗ ಕಣ್ಣನ್ನು ಉಜ್ಜಬಾರದು. ಸ್ವಚ್ಛವಾದ ನೀರಿನಿಂದ ಕಣ್ಣನ್ನು ತೊಳೆಯಬೇಕು. ಕಸವನ್ನು ಬೇರೊಬ್ಬರ ಸಹಾಯದಿಂದ ಸ್ವಚ್ಛವಾದ ಕರವಸ್ತ್ರದಿಂದ ತೆಗೆಸಬಹುದು. ಕಷ್ಟವೆನಿಸಿದರೆ ವೈದ್ಯರ ಬಳಿ ಹೋಗುವುದು ಕ್ಷೇಮ.

5. ತಲೆನೋವು, ತಲೆಭಾರ, ಕಣ್ಣಿಂದ ನೀರು ಸುರಿಯುವುದು, ಓದಲು ಸರಿಯಾಗಿ ಆಗದಿರುವುದು–ಇದ್ದಲ್ಲಿ ಕೂಡಲೇ ನೇತ್ರ ವೈದ್ಯರನ್ನು ಕಂಡು ದೃಷ್ಟಿ ಪರೀಕ್ಷಿಸಿಕೊಳ್ಳಬೇಕು.

6. ದೀಪಾವಳಿ, ಹುತ್ತರಿ ಅಥವಾ ಇನ್ನಿತರ ವಿಶೇಷ ಹಬ್ಬಗಳಂದು ಪಟಾಕಿ ಸಿಡಿಸುವುದು ಸಾಮಾನ್ಯ. ಆಗ ಅನವಶ್ಯಕವಾಗಿ ಹಲವಾರು ಜನರು ದೃಷ್ಟಿ ಕಳೆದುಕೊಳ್ಳುತ್ತಿರುವುದು ದುರದೃಷ್ಟಕರ. ಇಂಥ



ಡಾ॥ ಎನ್. ಎಸ್. ಪ್ರವೀಣ

ಸಂದರ್ಭಗಳಲ್ಲಿ ಕಣ್ಣನ್ನು ರಕ್ಷಿಸಿಕೊಳ್ಳಲು ಅತ್ಯಂತ ಎಚ್ಚರಿಕೆಯಿಂದಿರಬೇಕು. ಹಾಗೆಯೇ ಗಿಲ್ಲಿದಾಂಡು, ಕ್ರಿಕೇಟ್ ಇತ್ಯಾದಿ ಆಟವಾಡುವಾಗ ಎಚ್ಚರ ಅತ್ಯಗತ್ಯ.

7. ಕಣ್ಣಿಗೆ ಪೊರೆ [Cataract] ಬರುವುದು ವಯಸ್ಸಾದವರಲ್ಲಿ ಸಾಮಾನ್ಯವಾಗಿದೆ. ಇದಕ್ಕೆ ಶಸ್ತ್ರಚಿಕಿತ್ಸೆ ಅಗತ್ಯ.

8. ಕಣ್ಣಿಗೆ ಸೋಂಕಾದಲ್ಲಿ ಕಣ್ಣುಗಳು ಕೆಂಪಾಗಿ ನವೆ, ಉರಿತ ಇರುತ್ತದೆ. ರೆಪ್ಪೆಗಳು ಕಣ್ಣಿಗಂಟೆ ಕಣ್ಣಿನಿಂದ ಅಂಟಾದ ಹಳದಿ ದ್ರವ್ಯ ಹೊರಬರುತ್ತಿರುತ್ತದೆ. ಇದನ್ನು ಕಂಜಂಕ್ಟಿವೈಟಿಸ್ ಅಥವಾ 'ಮದ್ರಾಸ್ ಕಣ್ಣು' ಎಂದು ಕರೆಯುತ್ತಾರೆ. ಸೋಂಕಿರುವ ವ್ಯಕ್ತಿ ಕನ್ನಡಕ ಬಳಸಬೇಕು, ಬಿಸಿಲಿಗೆ ಕಣ್ಣೊಡ್ಡಬಾರದು. ಕಣ್ಣನ್ನು ಮುಟ್ಟಿಕೊಂಡ ಪ್ರತಿಬಾರಿಯೂ ಕೈಯನ್ನು ಸಾಬೂನಿನಿಂದ ತೊಳೆದುಕೊಳ್ಳಬೇಕು. ಸೋಂಕು ತಗಲಿದವರ ಟವಲ್, ಹಾಸಿಗೆ ಇತ್ಯಾದಿಗಳನ್ನು ಸೋಂಕಿಲ್ಲದವರು ಬಳಸಬಾರದು. ವೈದ್ಯರ ಸಲಹೆಯಂತೆ

(11 ನೇ ಪುಟ ನೋಡಿ)

ವಿವೇಕ ವಾಣಿ

ಪ್ರಿಯ ವಿದ್ಯಾರ್ಥಿಗಳೆ,

ವಿದ್ಯಾಭ್ಯಾಸದ ಗುರಿ ಅಥವಾ ಧ್ಯೇಯೋದ್ದೇಶಗಳೇನು ?

ಎಲ್ಲರ ಅಂತರ್ಯದಲ್ಲಿದ್ದು, ಬದುಕಿಸುವ ಪ್ರಾಣ ಶಕ್ತಿಯೇ ದೇವರು. ಆ ದೇವರು ಸರ್ವಶಕ್ತ, ಸರ್ವಜ್ಞ ಅಂದ ಮೇಲೆ ಅಂಥ ದೇವರಿರುವ ಎಲ್ಲರೂ ಸರ್ವಶಕ್ತರೂ, ಸರ್ವಜ್ಞರೂ ಆಗಬೇಕಿತ್ತಲ್ಲವೇ ? ಆದರೆ ಹಾಗಾಗುತ್ತಿಲ್ಲ. ಯಾಕೆ ಗೊತ್ತೆ? ಅಂತರ್ಯದಲ್ಲಿರುವ ಆ ದೇವರನ್ನು ಅಜ್ಞಾನ ಅಹಂಕಾರಾಧಿಗಳು ಕವಿದು, ಆ ದೇವರ ವರ್ಚಸ್ಸೆಲ್ಲ ವ್ಯಕ್ತವಾಗದಂತೆ ಮಾಡಿವೆ. ಸುಂದರ ಶಿಲ್ಪ ಮೂಡಿಸಲು ಚಾಣಾಕ್ಷ ಶಿಲ್ಪಿಯೊಬ್ಬ ಮೂರ್ತಿಗೆ ಬೇಡವಾದ ಕಲ್ಲನ್ನು ಕೆತ್ತಿ ತೆಗೆಯುವಂತೆ, ಆ ದೇವರ ವರ್ಚಸ್ಸೆಲ್ಲ ವ್ಯಕ್ತವಾಗುವಂತಾಗಲು ಕವಿದಿರುವ ಅಜ್ಞಾನ ಅಹಂಕಾರಾಧಿಗಳ ಕವಚವನ್ನು ಕರಗಿಸಿಕೊಳ್ಳಬೇಕು–ಕಳಚಿಕೊಳ್ಳಬೇಕು. ಹೀಗೆ ಎಲ್ಲರಲ್ಲೂ ಸುಪ್ತವಾಗಿರುವ ಆ ಸರ್ವಶಕ್ತತೆಯ-ಪರಿಪೂರ್ಣತೆಯ ಅಭಿವ್ಯಕ್ತಿಗೆ ದಾರಿ ಮಾಡಿಕೊಳ್ಳುವುದೇ ಶಿಕ್ಷಣದ ಮೂಲೋದ್ದೇಶ. ಚಿನ್ನದ ಅದಿರನ್ನು ಸಂಸ್ಕರಿಸಿ ಶುದ್ಧ ಚಿನ್ನವನ್ನು ಪಡೆಯುವಂತೆ ಶಿಕ್ಷಣದ ವಿಧಿ–ವಿಧಾನಗಳೂ, ಕ್ರಿಯೆ–ಪ್ರಕ್ರಿಯೆಗಳೂ ಅಂತರಂಗ ಸಂಸ್ಕರಣಗೈದು ವ್ಯಕ್ತಿಯ ಅಂತರ್ಯದಲ್ಲಿನ ಪಶುತ್ವವನ್ನು ನೀಗಿಸಿ, ದೈವತ್ವವನ್ನು ಪ್ರಚೋದಿಸಿ, ಆ ದೇವರ ಶಕ್ತಿ ಅಥವಾ ಆತ್ಮಶಕ್ತಿ ಹೊಮ್ಮುವಂತೆ ಮಾಡುತ್ತವೆ.ಆದರಿಂದಾಗಿ ವ್ಯಕ್ತಿಯ ಚಾರಿತ್ರ್ಯ, ಆತ್ಮವಿಶ್ವಾಸ ಕುದುರುತ್ತದೆ. ಮಹತ್ತನ್ನು ಸಾಧಿಸಬೇಕೆಂಬ ಕೆಚ್ಚು ಉಕ್ಕುತ್ತದೆ, ತನ್ನ ಕಾಲ ಮೇಲೆ ತಾನು ನಿಂತು ಇನ್ನೊಬ್ಬರಿಗೆ ಒಳಿತನ್ನುಂಟು ಮಾಡಬೇಕೆಂಬ ತುಡಿತ ಮಿಡಿಯುತ್ತದೆ. ಹೀಗೆ ವ್ಯಕ್ತಿಯ ಸರ್ವಾಂಗೀಣ ಪ್ರಗತಿ ಕಾರಕವಾಗಿ–ದೈಹಿಕ, ಬೌದ್ಧಿಕ, ನೈತಿಕ ಆಧ್ಯಾತ್ಮಿಕ ವಿಕಾಸಕ್ಕೆಡೆ ಮಾಡಿ, ಆತ ನಲಿವು, ಗೆಲವು, ಚೆಲುವುಗಳಿಂದ ಚೆನ್ನಾಗಿ ಬದುಕುವಂತೆ ಮಾಡುವುದೇ ಶಿಕ್ಷಣ. ಇಂಥ ಯೋಗ್ಯ ವ್ಯಕ್ತಿ ನಿರ್ಮಾಣವೇ ಶಿಕ್ಷಣದ ಧ್ಯೇಯೋದ್ದೇಶ. ಇಂತಹ ಶಿಕ್ಷಣದ ನಿರ್ಮಾಣವನ್ನು ನಮ್ಮ ಜನಾಂಗದ ವಿದ್ಯಾ ಸಂಘ ಸಂಸ್ಥೆ ಮಾಡಬೇಕು. ಆಗಲೇ ನಮ್ಮ ಜನಾಂಗ ಅಭಿವೃದ್ಧಿ ಹೊಂದಲು ಸಾಧ್ಯ.

○ **ಪಟ್ಟಡ ಪ್ರಭಾಕರ**

[ಹಿಂದಿನ ಪುಟದಿಂದ]

ಕಣ್ಣುಗಳ ಆರೋಗ್ಯ ರಕ್ಷಣೆ

ಆಂಟಿ ಬಯೋಟಿಕ್ ಔಷಧದ ಡ್ರಾಫ್ಸ್ ಕಣ್ಣಿಗೆ ಹಾಕಿಕೊಳ್ಳಬೇಕು.

9. ಕಣ್ಣಿಲ್ಲದವರಿಗೆ ನೇತ್ರದಾನ ಮಾಡುವುದು ಒಂದು ಪುಣ್ಯ ಕಾರ್ಯ. ಎಲ್ಲರೂ ಮರಣಾನಂತರ ತಮ್ಮ ಕಣ್ಣನ್ನು ದಾನ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

ಒಟ್ಟನಲ್ಲಿ ಕಣ್ಣಿಗೆ ಏನೇ ತೊಂದರೆ ಸಂಭವಿಸಿದರೂ ನಿರ್ಲಕ್ಷಿಸದೆ ಕೂಡಲೇ ನೇತ್ರ ವೈದ್ಯರನ್ನು ಕಂಡು ಅವರ ಸಲಹೆಪಡೆಯುವುದು ಅತ್ಯಂತ ಕ್ಷೇಮಕರ. ಅದು ಬಿಟ್ಟು ಹಾದಿ, ಬೀದಿ ನಾಟಿ ವೈದ್ಯರ ಬಳಿ ಅಲೆದಾಡುವುದರಿಂದ ಕಣ್ಣನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿಯೂ ಒದಗಿಬರಬಹುದು!

ಡಾ॥ ಎನ್. ಎಸ್. ಪ್ರವೀಣ ಎಂ.ಡಿ.
ಮದೆ, ಮಡಿಕೇರಿ

ಸಂಗಾತಿ

ಎಲೆಲೆ ಕೊಡಗು ಸಂಗಾತಿ
ಎಂದೆಂದಿಗೂ ನೀನು ನಮ್ಮ ಜೀವನಸಂಗಾತಿ
ಅಳಿಯದಿರಲಿ ನಮ್ಮ ಸಂಸ್ಕೃತಿ
ಮುಂದೆ ಬರಲಿ ನಮ್ಮ ಕೊಡಗು ಸಂಗಾತಿ.

○ ಉಳುವಾರನ **ದೇವಿ ಪ್ರಸಾದ್**
ಕಾಂತೂರು, ಮೂರ್ನಾಡು

[9ನೇ ಪುಟದಿಂದ]

ಮುಂದೆ ಬಂದವು. ಪ್ರಾರಂಭದಲ್ಲಿ ಇವರ ಉದ್ಯಮಕ್ಕೆ ಚಿಕ್ಕಾಸು ನೆರವು ನೀಡದ ಬ್ಯಾಂಕ್‌ಗಳು ಒಂದು ರೀತಿಯಲ್ಲಿ ತಮ್ಮ ಸ್ವಾಭಿಮಾನವನ್ನು ಕೆಣಕಿದ್ದರಿಂದ ಉದ್ಯಮದಲ್ಲಿ ಯಶಸ್ವಿಯಾಗಲುಸಾಧ್ಯವಾಯಿತು ಎನ್ನುವ ಶ್ರೀಮತಿ ಮಾಲತಿ ಹೆಬ್ಬಾರ್ ಮೂಲತಃ ಉಡುಪಿಯವರು.

ಎಸ್‌ಎಸ್‌ಎಲ್‌ಸಿವರೆಗೆ ವಿದ್ಯಾಭ್ಯಾಸ ಮಾಡಿರುವ ಇವರು 1974ರಲ್ಲಿ ಎಸ್. ಹರಿಹರ ಹೆಬ್ಬಾರ್ ಅವರನ್ನು ವಿವಾಹವಾದರು. ಬಿಡುವಾಗಿದ್ದಾಗ ಕಸೂತಿ ಕೆಲಸ, ಟೈಲರಿಂಗ್ ಕೆಲಸ,ಪೈಂಟಿಂಗ್‌ನಲ್ಲಿ ಮಾಲತಿ ನಿರತರಾಗಿರುತ್ತಾರೆ.

ಪ್ರಾಮಾಣಿಕ ಕಳಕಳಿ ಮತ್ತು ಶ್ರದ್ಧೆಯಿಂದ ದುಡಿದಿದ್ದರಿಂದ ಬಡತನವನ್ನೆಲ್ಲಾ ನೀಗಿ ಮಗಳ ಮದುವೆಯನ್ನು ಯಾರ ನೆರವಿಲ್ಲದೆ ಮಾಡುವಷ್ಟು ಆರ್ಥಿಕವಾಗಿ ಮುಂದುವರೆದಿರುವ ಮಾಲತಿ ಹೆಬ್ಬಾರ್ ಅವರನ್ನು ಮಂಡ್ಯನಗರದ ಸಿಟಿ ಲಯನ್ಸ್, ಮಾಂಡವ್ಯ ಲಯನ್ಸ್, ರೋಟರಿ ಸಂಸ್ಥೆ, ಮಾತೃ ಮಂಡಳಿಬ್ರಾಹ್ಮಣರಸಂಘ ಇನ್ನರ್ ವೀಲ್ ಕ್ಲಬ್ ಹಾಗೂ ಕರ್ನಾಟಕ ಹೊಟೇಲ್ ಮಾಲಿಕರ ಸಂಘದವರು ಗೌರವಿಸಿ ಇವರ ಪರಿಶ್ರಮವನ್ನು ಗುರುತಿಸಿದ್ದಾರೆ.

ಹೊಟೇಲ್ ಸ್ಥಾಪನೆಯಿಂದ ಸಂಸಾರದಲ್ಲಿ ಹೆಚ್ಚು ವೇಳೆ ಕಳೆಯಲಾಗದಿದ್ದರೂ ಹೊಂದಾಣಿಕೆ ಮಾಡಿಕೊಳ್ಳುವ ಮನೆ ಯಜಮಾನ ಮಕ್ಕಳ ಪ್ರೋತ್ಸಾಹ ಹಾಗೂ ಸಹಕಾರದಿಂದ ಶ್ರೀಮತಿ ಮಾಲತಿ ಹೆಬ್ಬಾರ್ ರಾಜ್ಯದ ಮಹಿಳೆಯರಿಗೆ ಸ್ಫೂರ್ತಿದಾಯಕವಾಗಿದ್ದಾರೆ.

ಇಬ್ಬರು ಹೆಣ್ಣು ಮಕ್ಕಳು ಅನುರಾಧ ಅರ್ಚನಾ ಮತ್ತು ಲೋಹಿತರೊಡಗೂಡಿ ಹರಿಹರ ಹೆಬ್ಬಾರೊಂದಿಗೆ ಸುಖಜೀವನ ನಡೆಸುತ್ತಿರುವ ಇವರು ಕೈಸೋಲುವವರೆಗೆ ಉದ್ಯಮಬಿಡೋದಿಲ್ಲ ಎಂದುಧೈರ್ಯದಿಂದ ಹೇಳುತ್ತಾರೆ. ಇವರ ಈ ಪ್ರಯತ್ನ ನಮ್ಮ ಗೌಡ ನೀರೆಯರಿಗೆ ಮಾದರಿಯಾಗಬಹುದೆ?

○ ವರದಿ : **ಶೀಲಾಮಣಿ ಪಟ್ಟಡ**

ಗೌಡರ ವಿವಾಹ ಪದ್ಧತಿಯ ಶೋಬಾನೆಗಳು

ಆರತಿ ಹಾಡುಗಳು :

ಅ) ಸ್ನಾನ ಮಾಡಿ ಬರುವಾಗ ಹೇಳುವ ಆರತಿ ಹಾಡು:

ಮುತ್ತಿನ ಮಣಿಮಂಟಪ ಮಧ್ಯದಲಿ । ಸ್ವಾಮಿ ಶ್ರೀರಾಮಚಂದ್ರ ಮಡದಿ ಜಾನಕಿ ನಿಂತಿರಲು । ಸತಿ ಪತಿಗೂ ಅಂಗನೆ ಸೀತೆಗೂ ಮುತ್ತಿನಾರತಿಯ ಬೆಳಗಿರೆ ॥ ಚಿನ್ನದ ಮಣಿಮಂಟಪ ಮಧ್ಯದಲಿ । ಸ್ವಾಮಿ ಶ್ರೀರಾಮಚಂದ್ರ ಮಡದಿ ಜಾನಕಿ ನಿಂತಿರಲು । ಸತಿ ಪತಿಗೂ ಅಂಗನೆ ಸೀತೆಗೂ ಚಿನ್ನದಾರತಿಯ ಬೆಳಗಿರೆ ॥ ಹವಳದ ಮಣಿಮಂಟಪ ಮಧ್ಯದಲಿ । ಸ್ವಾಮಿ ಶ್ರೀರಾಮಚಂದ್ರ ಮಡದಿ ಜಾನಕಿ ನಿಂತಿರಲು ! ಸತಿಪತಿಗೂ ಅಂಗನೆ ಸೀತೆಗೂ ಹವಳದಾರತಿಯ ಬೆಳಗಿರೆ ॥

ಆ) ಅಕ್ಕಿಆರತಿ :

ಶ್ರೀ ತುಳಸಿ ಮಧ್ಯದೊಳಗಿರುವ ಕೃಷ್ಣನ ಬಳಸಿ ನೋಡುವ ಬನ್ನಿರೇ । ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ। ಸ್ವಾಮಿ ರಂಗನಾಥನ ಪ್ರಿಯೆಗೆ । ಸ್ವಾಮಿ ರಂಗನಾಥನ ಪ್ರಿಯೆಗೆ॥ ಕಡಲಸುತ ಪಿಡಿದು ಬಲು ಬೆಡಗಿನಿಂದಿರೆ ಸ್ವಾಮಿ । ಬಲು ಬೆಡಗಿನಿಂದಿರೆ ಬರುವುದೇ । ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ । ಸ್ವಾಮಿ ರಂಗನಾಥನ ಪ್ರಿಯೆಗೆ ॥ ಬಿಲ್ಲ ಹಬ್ಬಕೆ ಅಲ್ಲಿ ಪೋಗಿ ಮಾವ ಕಂಸನ ಕೊಂದಿರೆ । ಸ್ವಾಮಿ ಮಾವ ಕಂಸನ ಕೊಂದಿರೆ । ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ। ಸ್ವಾಮಿ ರಂಗನಾಥನ ಪ್ರಿಯೆಗೆ ॥ ಹಾಸು ಮಂಚವ ಲೇಸು ತಲೆದಿಂಬು ಅಕ್ಕಿ ಹಾಸಿಗೆ ಹಾಸಲೇ । ಮಂಗಳಾರತಿ ತಂದು ಬೆಳಗಿರೆ ರಂಗನಾಥನ ಪ್ರಿಯೆಗೆ । ಸ್ವಾಮಿ ರಂಗನಾಥನ ಪ್ರಿಯೆಗೇ ॥

ಇ) ಆರತಿ ಹಾಡು :

ನೀರಜಭವೆಗೆ ಆರತಿಯ ಸೇರಿ ಬೆಳಗಿರೆ । ಕ್ಷೀರವಾರಧೀಸುತಗೆ ಸಾರ ಸಾಕ್ಷಿಗೆ ನಾರದಾದಿ ಮುನಿರುಗೆಗೆ ಮಾರಜನಕನ್ನರಾಣಿಗೆ । ಉರಗವೇಣಿಗೆ ಮಧುರವಾಣಿಗೆ । ಅಂಗಜಾತ್ರಜನನಿಗೆ ವರಭೃಂಗ ಕುಂತಳೇಗೆ । ನಿತ್ಯಮಂಗಳಾಂಗಿಗೆ ಆರತಿಯ ಸೇರಿ ಬೆಳಗಿರೆ ।

ಈ) ಆರತಿ ಹಾಡು :

ಮಂಗಳಾರತಿ ಎತ್ತಿದರು ರಂಗೆಯರು ರಂಗನಾಥನಿಗೆ। ಸಂಭ್ರಮದಿಂದಲಿ ಮೂರು ಲೋಕವನ್ನು ಒಲಿದುಪಾಲಿಸುವನಗೆ ನೀಲಮೇಘ ಶ್ಯಾಮಗೆ ಕರುಣಪಾಲ ಕಮಲನಾಭಗೆ । ಸುರಚೀರ ಗಂಭೀರ ಹರಿಗೆ । ರಂಗನಾಥಗೆ ಜಗನ್ನಾಥಗೆ । ಮಂಗಳಾರತಿ ಎತ್ತಿದರು ರಂಗನಾಥಗೆ.

ಉ) ಆರತಿ ಬೆಳಗುವ ಹಾಡು :

ಆಲದೆಲೆಯ ಮೇಲೆ ಲೋಲನಾಡುತಾ ಬಂದ ಲೋಲಾಕ್ಷಿ ಶಿವನಿಗೆ ಪತಿಯಾಗಬೇಕೆಂದು ಎತ್ತಿದರತಿಳಾಯ ಶ್ರೀ ಸತ್ಯಬಾಮೆಗೆ ಬೆಳಗಿದಳಾರತಿಯ ಮಾವ ಕಂಸನ ಕೊಂದು ಮಂಗಳಾಕ್ಷಿ ಶಿವನಿಗೆ ಪತಿಯಾಗಬೇಕೆಂದು॥ ಎತ್ತಿದಳಾರತಿಯ॥ ಶ್ರೀ ಸತ್ಯಬಾಮೆಗೆ ಬೆಳಗಿದಳಾರತಿಯ ॥ ಸಂಗರೆಲ್ಲಾ ಕೂಡಿ ಸಂಗೀತವ ಹಾಡಿ ಸಂಗಳ ಶಿವನಿಗೆ ಪತಿಯಾಗಬೇಕೆಂದು ॥ಎತ್ತಿ॥ ಮುತ್ತೈದೆಯರೆಲ್ಲಾ ಕೂಡಿ ಮುತ್ತಿನ ಆರತಿಯ ಮುತ್ತಾಕ್ಷಿ ಶಿವನಿಗೆ ಪತಿಯಾಗಬೇಕೆಂದು ಎತ್ತಿದಳಾರತಿಯ ಶ್ರೀ ಸತ್ಯಬಾಮೆಗೆ ॥ ಬೆಳಗಿದಳಾರತಿಯ ॥

ಊ) ವಧುವರರಿಗೆ ಅಕ್ಕಿ ಆರತಿ :

ಚೆಲ್ಲಿರೇ ಮಲ್ಲಿಗೆಯ ನೀವೆಲ್ಲರೂ ಸೇರಿ ಮದುಮಕ್ಕಳ ತಲೆ ತುಂಬ ಚೆಲ್ಲಿರೇ ಮಲ್ಲಿಗೆಯ। ವಲ್ಲಾಕ್ಷಿಯರೆಲ್ಲರೂ ಸೇರಿ ಉಲ್ಲಾಸನ ಮೇಲೆ ಚೆಲ್ಲಿರೆ ಮಲ್ಲಿಗೆಯ । ನೀವೆಲ್ಲರೂ ಸೇರಿ ಚೆಲ್ಲಿರೇ ಮಲ್ಲಿಗೆಯ । ಕಡಗ ಕಂಕಣದಿಂದ ಬಂದ ಉಡುಪಿ ಶ್ರೀ ಕೃಷ್ಣನ ಮೇಲೆ ಚೆಲ್ಲಿರೇ ಮಲ್ಲಿಗೆಯ । ದೇವ ಲೋಕದಿಂದ ಬಂದ ದೇವಪಯನ ಮೇಲೆ ಚೆಲ್ಲಿರೇ ಮಲ್ಲಿಗೆಯ । ದೇವಲೋಕದಿಂದ ಬಂದ ನಾರದ ಮುನಿಯ ಮೇಲೆ ಚೆಲ್ಲಿರೇ ಮಲ್ಲಿಗೆಯ । ಗಂಧ ಪರಿಮಳದಿಂದ ತುಂಬಿದ ಸುಂದರ ಬಾಲಯ್ಯನ ಮೇಲೆ ಚೆಲ್ಲಿರೇ ಮಲ್ಲಿಗೆಯ ನೀವೆಲ್ಲರೂ ಸೇರಿ ಚೆಲ್ಲಿರೇ ಮಲ್ಲಿಗೆಯ ॥

[ಮುಂದುವರೆಯುವುದು]

ಆರತಿ ಎತ್ತುವ ಹಾಡು

ಆರತಿಯೆತ್ತಿರೆ ವಾರಿಜ ಮುಖಿ । ಸೇತಾದೇವಿಗೆ ॥ ಹದಿನಾಲ್ಕು ಲೋಕವಾಳುವ ಶ್ರೀ ರಾಮಚಂದ್ರಗೆ ॥ ಹರಡಿ ಕಂಕಣ ಕಮಲ ದೊರೆ ಸರಿಗೆ ಸರಗಳ । ಪಂಕಿ ಭಾಪುರಿ ತೊಟ್ಟ ಸೀರೆ ಪೈಠಣಿ ಕುಪ್ಪಸ ಗೊಂಡೆರಾಕಟಚಂದ್ರ ಕತ್ತಿಗೆ ಹರಳು ಭಗುರ ದುಂಡು ಮಲ್ಲಿಗೆದವನ ಸಂಪಿಗೆ ಅರಳು ಶೃಂಗಾರ ॥ ಆರತಿಯೆತ್ತಿರೆ ವಾರಿಜ ಮುಖಿ ರಾಮಚಂದ್ರಗೆ ॥ ಭೂಮಿಯಾಳ್ವರಾಜದೊರೆ ರಾಮಚಂದ್ರಗೆ । ಭೂಮಿದೇವಿ ಮಗಳು ಸೀತೆ ನಾರಿ ಜಾನಕಿಗೆ ॥ ಆರತಿಯೆತ್ತಿರೆ ವಾರಿಜಮುಖಿ ಸೀತಾದೇವಿಗೆ ॥

ಕಾಳಿಯಂಡ ಅಪ್ಪಚ್ಚ ತಂಗಮ್ಮ,
ಬಿಳಿಗೇರಿ ಗ್ರಾಮ

ಹಿತನುಡಿ

ದಿನಗಳು ಓಡುತ್ತಿವೆ, ಸಮಯ ಮತ್ತು ಸಮುದ್ರ ತರಂಗ ಯಾರನ್ನೂ ಕಾಯುವುದಿಲ್ಲ, ಶಕ್ತಿ ಇರುವಾಗಲೇ ಶಾಶ್ವತ ಸಂಪತ್ತನ್ನು ಸಂಪಾದಿಸು. —ಸುಭಾಷಿತ

ಗೌಡ ಸಾರಸತ್ವ ಲೋಕದ ಖ್ಯಾತ ಕಥೆಗಾರ ಡಾ|| ಬೆಸಗರಹಳ್ಳಿ ರಾಮಣ್ಣ ಇನ್ನಿಲ್ಲ

ಕನ್ನಡದ ಖ್ಯಾತ ಕಥೆಗಾರ ವರ್ಣರಂಜಿತ ವ್ಯಕ್ತಿತ್ವದ ಡಾ|| ಬೆಸಗರಹಳ್ಳಿ ರಾಮಣ್ಣನವರು. 13/7/98ರ ಸಂಜೆ 4-30 ಗಂಟೆಗೆ ಮಲ್ಯ ಆಸ್ಪತ್ರೆಯಲ್ಲಿ ತೀವ್ರ ಅನಾರೋಗ್ಯದ ನಿಮಿತ್ತ ನಿಧನರಾದರು. ಅವರಿಗೆ 60 ವರ್ಷ ವಯಸ್ಸಾಗಿತ್ತು. ಪತ್ನಿ ಡಿ.ಪಿ. ರಾಜಮ್ಮ, ಪುತ್ರ ಬಿ. ಆರ್. ರವಿಕಾಂತೇಗೌಡ, ಪುತ್ರಿ ಬಿ. ಆರ್. ಪೂರ್ಣಿಮಾ ಅವರನ್ನೊಳಗೊಂಡಂತೆ ಅಪಾರ ಬಂಧು-ಬಳಗ, ಸ್ನೇಹವಲಯ ಹಾಗೂ ಅಗಾಧ ಕನ್ನಡ ಓದುಗ ಪ್ರಪಂಚವನ್ನು ಅವರು ಅಗಲಿದ್ದಾರೆ.

ಮೂತ್ರಪಿಂಡದ ಶಸ್ತ್ರಚಿಕಿತ್ಸೆಗೊಳಗಾಗಿ ಚೇತರಿಸಿಕೊಂಡಿದ್ದ ಡಾ|| ರಾಮಣ್ಣನವರು ಕಳೆದ ಮೂರ್ನಾಲ್ಕು ದಿನಗಳ ಹಿಂದೆ ಪಾರ್ಶ್ವವಾಯು ಪೀಡಿತರಾಗಿ ಪುನಃ ಆಸ್ಪತ್ರೆಗೆ ಸೇರಿದ್ದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ವಿಭಾಗದ ಸಲಹಾ ಸಮಿತಿಯ ಸದಸ್ಯರಾಗಿ ಈಚೆಗೆ ನೇಮಕಗೊಂಡಿದ್ದ ಡಾ|| ಬೆಸಗರಹಳ್ಳಿ ರಾಮಣ್ಣ ಅವರು ಅಕಾಡೆಮಿಯ ಕಾರ್ಯದ ಸಂಬಂಧ ಕಳೆದ ಜುಲೈ 8ರಂದು ಬೆಂಗಳೂರಿಗೆ ಬಂದಿದ್ದು ಈ ಸಂದರ್ಭದಲ್ಲೇ ಅವರು ಪಾರ್ಶ್ವವಾಯು ಪೀಡಿತರಾಗಿದ್ದರು. ಮೊದಲು ಜಯದೇವ ಹೃದ್ರೋಗಆಸ್ಪತ್ರೆಗೆ ದಾಖಲಿಸಲ್ಪಟ್ಟ ಅವರು ತರುವಾಯ ಮಲ್ಯ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದರು.

ವೈದ್ಯರ ಎಲ್ಲಾ ಪ್ರಯತ್ನಗಳು ಬೆಸಗರಹಳ್ಳಿ ಅವರ ಜೀವವನ್ನು ಉಳಿಸಿಕೊಳ್ಳುವಲ್ಲಿ ನಿಷ್ಫಲವಾಯಿತು.

ಲೇಖಕರುಗಳಾದ ಬರಗೂರು ರಾಮಚಂದ್ರಪ್ಪ, ಅಗ್ರಹಾರ ಕೃಷ್ಣಮೂರ್ತಿ, ಸಿದ್ದಲಿಂಗಯ್ಯ, ಎಲ್. ಹನುಮಂತಯ್ಯ, ನಾಟಕ ನಿರ್ದೇಶಕ ಸಿ. ಜಿ. ಕೆ., ಸಿನಿಮಾ ನಿರ್ದೇಶಕ ನಂಜುಂಡೇಗೌಡ, ಅಪ್ಪಗೆರೆ ತಿಮ್ಮರಾಜು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವಾರಾಧ್ಯ, ಅಧಿಕಾರಿಗಳಾದ ಅ. ರಾ. ಚಂದ್ರಹಾಸ ಗುಪ್ತ, ವೈ. ಕೆ. ಮುದ್ದುಕೃಷ್ಣ ಮತ್ತಿತರರು ಡಾ|| ಬೆಸಗರಹಳ್ಳಿ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಮಹಾ ಸಿಡುಕಿನ ಆದರೆ ಅಷ್ಟೇ ಪ್ರೀತಿ ತುಂಬಿದ ಜೀವ ಅದು. ಕೋಪಿಸಿಕೊಳ್ಳುವುದೆಂದರೆ ಇನ್ನಿಲ್ಲದಂತೆ. ಅಂದರೆ ಜ್ವಾಲಾಮುಖಿಯು ಹಾಗೆ ಸ್ಫೋಟಗೊಳ್ಳುವಂತೆ ಕೋಪಿಸಿಕೊಳ್ಳುತ್ತಿದ್ದ, ಪ್ರೀತಿಸುವುದೆಂದರೆ ಮಗುವೇ ಆಗಿ ಮೆರೆದಾಡುತ್ತಿದ್ದ ಬೆಸಗರಹಳ್ಳಿ ರಾಮಣ್ಣ ಅವರು ನಿಜಕ್ಕೂ ಈ ನೆಲದ ಮತ್ತು ಗೌಡ ಜನಾಂಗದ ಸಿರಿ. ನೆಲದ ಒಡಲು, ನೆಲದ ಸಿರಿ ಇಂಥವೇ ಹೆಸರುಗಳನ್ನು ತಮ್ಮ ಕಥಾಕೃತಿಗಳಿಗೆ ಇಡುತ್ತಾ ಬಂದಿದ್ದ ಡಾ|| ಬೆಸಗರಹಳ್ಳಿಯವರ ಕಥೆಗಳು ತುಂಬಿಕೊಂಡ ಜೀವವಾಗಿದ್ದವು.

ಮಂಡ್ಯ ನೆಲದ ಬಗ್ಗೆ, ಮಂಡ್ಯ ಭಾಷೆಯ ಬಗ್ಗೆ, ಮಂಡ್ಯ ಬೆಳಸಿನ ಬಗ್ಗೆ ವಿಚಿತ್ರ ವ್ಯಾಮೋಹವನ್ನಿಟ್ಟುಕೊಂಡಿದ್ದರು ಇವರು ಕುಂತಲ್ಲೇ ಕಥೆಗಳನ್ನು ಕೊಡುತ್ತಿದ್ದ ವ್ಯಕ್ತಿಯಾಗಿರುತ್ತಿದ್ದರು. ತಮ್ಮ ಬರವಣಿಗೆಯ ಬಗ್ಗೆ ಎಷ್ಟು ವ್ಯಾಮೋಹಿಯಾಗಿದ್ದರೋ ಅಷ್ಟೇ ವ್ಯಾಮೋಹವನ್ನು ಇತರೆ ಉದಯೋನ್ಮುಖದ ಬರವಣಿಗೆಯ ಬಗ್ಗೆಯೂ ಸಹ ತೋರಿಸುತ್ತಿದ್ದರು. ಇದು ಅವರ ಸಹಜ ಗುಣಲಕ್ಷಣವಾಗಿತ್ತು.

ಬೆಸಗರಹಳ್ಳಿ ರಾಮಣ್ಣನವರು 1938ರ ಆಗಸ್ಟ್ 15ರಂದು ಮದ್ದೂರು ತಾಲೋಕಿನ ಬೆಸಗರಹಳ್ಳಿಯಲ್ಲಿ ತಂದೆ ಚಿಕ್ಕ ಎಲ್ಲೇಗೌಡ, ತಾಯಿ ದೊಡ್ಡ ತಾಯಮ್ಮನವರ ಮಗನಾಗಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಮದ್ದೂರಿನಲ್ಲೂ, ಮೈಸೂರಿನಲ್ಲಿ ಸರಕಾರಿ ವೈದ್ಯಕೀಯ ವ್ಯಾಸಂಗವನ್ನು ಪೂರೈಸಿ ಬಹುಪಾಲು ಸೇವೆಯನ್ನು ಹಳ್ಳಿಗಾಡಿನಲ್ಲೇ ಸವೆಸಿದರು. 1974ರಲ್ಲಿ ಬಿಹಾರದ ವಿಶ್ವ ಆರೋಗ್ಯಸಂಸ್ಥೆಯಡಿ ವಿಶೇಷ ಸೇವೆ ಸಲ್ಲಿಸಿದಕ್ಕೆ ಅವರನ್ನು ಸನ್ಮಾನಿಸಲಾಗಿದೆ. 1965ರಲ್ಲಿ ಪ್ರಜಾವಾಣಿ, ದೀಪಾವಳಿ ಕಥಾಸ್ಪರ್ಧೆಯಲ್ಲಿ "ಸುಗ್ಗಿ"ಗೆ ಪ್ರಥಮ ಬಹುಮಾನ ಗಿಟ್ಟಿಸಿದರು. ನೆಲದ ಒಡಲು, ಗರ್ಜನೆ, ಹರಕೆಯ ಹೆಣ, ಒಂದು ಹುಡುಗನಿಗೆ ಬಿದ್ದ ಕನಸು, ರಕ್ತ ಕಣ್ಣೀರು, ತೋಳಗಳ ನಡುವೆ, ಅವ್ವ, ಕಕರನ ಯುಗಾದಿ, ಗಾಂಧಿ, ಬೆಲ್ಲ, ಕರುಣಾಳು ಬಾ ಬೆಳಕೆ, ಗಂಗಾ ಎಂಬ ಕಥೆಗಳನ್ನು ಹಾಗೂ ಪ್ರಜಾಪ್ರಭುತ್ವ, ಮೂರು ಮಂಗಗಳು ಎಂಬ ಕಾದಂಬರಿಯನ್ನು ಬರೆದಿದ್ದಾರೆ.

1968-72ರಲ್ಲಿ ಕಥಾ ಸಾಹಿತ್ಯ ವಿಭಾಗದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಥಮ ಬಹುಮಾನ ಬಂದಿದೆ. ಒಂದು ಹುಡಗನಿಗೆ ಬಿದ್ದ ಕನಸು ಕಥಾ ಸಂಕಲನ 1979ರಲ್ಲಿ ಶ್ರೇಷ್ಠ ಪುಸ್ತಕವೆಂದು ವರ್ಧಮಾನ ಪ್ರಶಸ್ತಿ ದೊರೆಯಿತು. ಕರ್ನಾಟಕ ಸಾಹಿತ್ಯ ಅಕಾಡೆಮಿಗೆ 2 ಬಾರಿ ಸದಸ್ಯರಾಗಿದ್ದರು. ಹಂಪಿಯ ಕನ್ನಡ ವಿ. ವಿ. ಯ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದರು. ಕುವೆಂಪು, ಟಾಲ್‌ಸ್ಟಾಯ್, ದಾಸ್ತೋಯೆವ್‌ಸ್ಕಿ, ಮೈಕಲ್ ಸೋಲೆಕೋವ್, ಆಂಟನ್, ಚೆಕಾವ್, ಪ್ರೇಮಚಂದ್ ಇವರ ಪ್ರಭಾವಕ್ಕೆ ಒಳಗಾಗಿದ್ದರು. ಕನ್ನಡದ ಪ್ರೇಮ್‌ಚಂದ್ ಎಂದೇ ಕರೆಸಿಕೊಳ್ಳುತ್ತಿದ್ದರು.

'ಕೊಡಗು ಸಂಗಾತಿ' ಪತ್ರಿಕೆಯ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರರವರ ಸ್ನೇಹಿತರಾಗಿ, ಕೊಡಗು ಸಂಗಾತಿ ಪತ್ರಿಕೆ ಹುಟ್ಟಲು ಇವರ ಕೆಲವು ಮಟ್ಟಿನ ಪ್ರಭಾ

[15ನೇ ಪುಟ ನೋಡಿ]

ಬೆಳ್ಳುಳ್ಳಿಯ ಮಹತ್ವ

ಪ್ರತಿ ಮನೆಯಲ್ಲಿಯೂ ಪ್ರತಿ ದಿನವೂ ಬಳಕೆಯಲ್ಲಿರುವ ದ್ರವ್ಯ ಬೆಳ್ಳುಳ್ಳಿ. ಒಂದಲ್ಲ ಒಂದು ವಿಧದಲ್ಲಿ ಅಡಿಗೆಯಲ್ಲಿ ಉಪಯೋಗವಾಗುತ್ತಿದೆ. ಮಾಂಸಾಹಾರಿಗಳಿಗಂತೂ ಬೆಳ್ಳುಳ್ಳಿ ಇಲ್ಲದ ಅಡಿಗೆ ರುಚಿಸುವುದೇ ಇಲ್ಲ. ಬೆಳ್ಳುಳ್ಳಿಯು ವಾಸನೆಯಲ್ಲಿ ಈರುಳ್ಳಿಯ ಅಣ್ಣ. ಗಾತ್ರದಲ್ಲಿ ಅದರ ತಮ್ಮ. ಇದರ ಘಾಟು ವಾಸನೆ ಕೆಲವರಿಗೆ ಹಿಡಿಸದೇ ಇರಬಹುದು. ಬೆಳ್ಳುಳ್ಳಿಯಲ್ಲಿರುವ ತೀವ್ರ ವಾಸನೆಗೆ ಇದರಲ್ಲಿರುವ 'ಅಲ್ಲಿಸೀನ್' ಎಂಬ ರಾಸಾಯನಿಕವೇ ಕಾರಣ.

ಬೆಳ್ಳುಳ್ಳಿಯ ಜನ್ಮದ ಬಗ್ಗೆ ಹಿಂದೂಗಳಲ್ಲಿ ಒಂದು ನಂಬಿಕೆ ಇದೆ. ಗರುಡನು ಇಂದ್ರನ ಬಳಿಯಿಂದ ಅಮೃತವನ್ನು ಅಪಹರಿಸಿ ಕೊಂಡೊಯ್ಯುವಾಗ ಕೆಲವು ಬಿಂದುಗಳು ಭೂಮಿಯ ಮೇಲೆ ಬಿದ್ದು ಬೆಳ್ಳುಳ್ಳಿಯ ರೂಪ ತಾಳಿದವಂತೆ.

ಬೆಳ್ಳುಳ್ಳಿ ದೇಹಕ್ಕೆ ಶಕ್ತಿಯನ್ನು ನೀಡುತ್ತದೆ. ಹಸಿವನ್ನು ಹೆಚ್ಚಿಸುತ್ತದೆ. ಸ್ವರ-ಧ್ವನಿಯನ್ನು ಸರಿಪಡಿಸುತ್ತದೆ. ವೀರ್ಯವರ್ಧಕ, ಸೌಂದರ್ಯವರ್ಧಕ, ಕಣ್ಣು, ಕಂಠ ಕೂದಲಿಗೆ ಹಿತಕಾರಿ. ಹೃದ್ರೋಗವನ್ನು ತಡೆಯುತ್ತದೆ. ತಾರುಣ್ಯವನ್ನು ನೆಲೆಗೊಳಿಸಿ ವೃದ್ಧಾಪ್ಯವನ್ನು ದೂರವಿಡುತ್ತದೆ. ನಿತ್ಯ ಸೇವನೆಯಿಂದ ಆರೋಗ್ಯವೂ, ಶಕ್ತಿಯೂ ವೃದ್ಧಿಯಾಗುತ್ತದೆ. ಕರುಳಿನ ದೋಷಗಳನ್ನು ನಿವಾರಿಸುತ್ತದೆ. ಬೆಳ್ಳುಳ್ಳಿಯಲ್ಲಿ ಕೆಮ್ಮು, ದಮ್ಮು, ಕಿವಿಡುತನ, ಶ್ವಾಸನಾಳದ ತೊಂದರೆಗಳು, ಜ್ವರ ಮುಂತಾದುವನ್ನು ನಿವಾರಿಸುವ ಶಕ್ತಿ ಇದೆ. ಮೂತ್ರದೋಷಗಳನ್ನು ನಿವಾರಿಸುತ್ತದೆ. ರಕ್ತದ ಒತ್ತಡವನ್ನು ಹತೋಟಿಯಲ್ಲಿಡುತ್ತದೆ. ಇದರಲ್ಲಿ ಗಂಧಕಾಂಶವು ಹೆಚ್ಚಾಗಿರುವುದರಿಂದ ರಕ್ತದೋಷಗಳನ್ನು ನಿವಾರಿಸುತ್ತದೆ. ಗಂಟಲು ಉಸಿರಾಟದ ತೊಂದರೆಯನ್ನು ಹೋಗಲಾಡಿಸುತ್ತದೆ. ದೇಹದಲ್ಲಿ ಶಾಖವನ್ನುಂಟು ಮಾಡುವುದರಿಂದ ಗರ್ಭಿಣಿಯರಿಗಂತೂ ಬೆಳ್ಳುಳ್ಳಿ ಒಂದು ವರದಾನವೆನ್ನಬಹುದು. ಒಣ ಕೆಮ್ಮು, ನಾಯಿ ಕೆಮ್ಮು ಇರುವಾಗ ಬೆಳ್ಳುಳ್ಳಿ ಮಾಲೆಯನ್ನು ಮಕ್ಕಳಿಗೆ ತೊಡಿಸುವರು. ಕಫ, ಶೀತ, ನೆಗಡಿ ಮುಂತಾದ ಬಾಧೆಗಳನ್ನು ನಿವಾರಿಸುತ್ತದೆ. ರಾಕ್ಷಸದಂತಹ ರೋಗಗಳನ್ನು ಗುಣಪಡಿಸುವುದರಿಂದ ಇದಕ್ಕೆ ಸಂಸ್ಕೃತದಲ್ಲಿ 'ರಕ್ಷೋಘ್ನ' ಎಂಬ ಅರ್ಥವಿದೆ. ರೋಗಗಳನ್ನು ನಾಶ ಮಾಡುವ ಗುಣವಿರುವುದರಿಂದ ಇದನ್ನು ರಕ್ಸಸ್ ಎಂದೂ ಕರೆಯುವರು. ಏಡ್ಸ್ ರೋಗವನ್ನು ಗುಣಪಡಿಸುವ ಶಕ್ತಿ ಇದಕ್ಕಿದೆಯೆಂದು ಇತ್ತೀಚಿನ ಸಂಶೋಧನೆಗಳು ತಿಳಿಸಿವೆ.

ಬೆಳ್ಳುಳ್ಳಿಯನ್ನು ನುಣ್ಣಗೆ ಅರೆದು ತುಪ್ಪದೊಡನೆ ಬಿಸಿ ಮಾಡಿ ಅನ್ನದೊಂದಿಗೆ ಬೆರೆಸಿ ಊಟ ಮಾಡುವುದರಿಂದ ಸಮಸ್ತ ವಾತ ರೋಗಗಳು ನಿವಾರಣೆಯಾಗುವುವು. ಹಸಿವು ಹೆಚ್ಚುವುದು, ಜೀರ್ಣಶಕ್ತಿ ಹೆಚ್ಚುವುದು. ವಾಯುಪ್ರಕೋಪ, ಜಠರ ದೋಷಗಳು ನಿವಾರಣೆಯಾಗುವುವು.

ಬೆಳ್ಳುಳ್ಳಿಯನ್ನು ಜಜ್ಜಿ ಒಂದು ಚಮಚ ಕೊಬ್ಬರಿ ಎಣ್ಣೆಯಲ್ಲಿ ಕುದಿಸಿ ತಣ್ಣಗಾದ ನಂತರ ಕೆಲವು ತೊಟ್ಟುಗಳನ್ನು ಕಿವಿಗೆ ಬಿಡುವುದರಿಂದ ಕಿವಿ ನೋವು ನಿವಾರಣೆಯಾಗುತ್ತದೆ.

ಒಂದು ಇಡೀ ಬೆಳ್ಳುಳ್ಳಿಯನ್ನು ಜಜ್ಜಿ ಅರ್ಧ ಲೀಟರ್ ಹಾಲಿನಲ್ಲಿ ಚೆನ್ನಾಗಿ ಕುದಿಸಿ ಕಾಲು ಭಾಗಕ್ಕೆ ಇಳಿಸಿಕೊಂಡು ದಿನಕ್ಕೆ ಎರಡು ಬಾರಿ ಸೇವಿಸುವುದರಿಂದ ಎದೆ ನೋವು, ಶ್ವಾಸನಾಳಗಳ ತೊಂದರೆ, ನಿಮೋನಿಯಾ ಬ್ರಾಂಕೈಟಿಸ್, ದಮ್ಮು-ಕೆಮ್ಮು ನಿವಾರಣೆಯಾಗುವುವು.

ಬಾಣಂತಿಯರು ಆರೋಗ್ಯದಿಂದಿರಲು, ದೇಹ ಬೆಚ್ಚಗಿರಲು, ಶೀತವಾಗದೆ [ಸನ್ನಿಯಾಗದೆ.] ಇರಲು ಬಿಸಿ ಅನ್ನಕ್ಕೆ ತುಪ್ಪ, ಕಾಳು ಮೆಣಸಿನಪುಡಿ, ಬೆಳ್ಳುಳ್ಳಿ ಈ ಮೂರನ್ನೂ ಕೊಡುವ ಪದ್ಧತಿ ಅನಾದಿಕಾಲದಿಂದಲೂ ರೂಢಿಯಲ್ಲಿದೆ. ಅಲ್ಲದೆ ಬಾಣಂತಿಯರಿಗೆ ಶೀತ ಬಾಧೆಯಾಗಬಹುದೆಂದು ಹತ್ತಿಯಲ್ಲಿ ಬೆಳ್ಳುಳ್ಳಿ ತೊಳೆಯನ್ನು ಸುತ್ತಿ ಕಿವಿಯಲ್ಲಿಡುವ ಪದ್ಧತಿಯೂ ರೂಢಿಯಲ್ಲಿದೆ.

ನೂರು ಗ್ರಾಂ ಬೆಳ್ಳುಳ್ಳಿಯನ್ನು ಸಿಪ್ಪೆ ಸುಲಿದು ನುಣ್ಣಗೆ ಜಜ್ಜಿಕೊಳ್ಳಬೇಕು. ಇದನ್ನು ಅರ್ಧಲೀಟರ್ ಅಪ್ಪಟ ಹಾಲಿನಲ್ಲಿ ಕುದಿಸಿ, ಕುದಿದು ಗಟ್ಟಿಯಾದಾಗ ಇಳಿಸಿಕೊಂಡು ಅವರೆಕಾಳಿನ ಗಾತ್ರದ ಮಾತ್ರೆಗಳನ್ನು ಮಾಡಿಟ್ಟುಕೊಳ್ಳಬೇಕು. ಪ್ರತಿ ದಿನ ಬೆಳಗ್ಗೆ ಒಂದು ಅಥವಾ ಎರಡು ಮಾತ್ರೆಗಳನ್ನು ಬಿಸಿ ನೀರಿನೊಂದಿಗೆ 42 ದಿನಗಳು ಸೇವಿಸಿದರೆ ದೇಹದ ಕೊಬ್ಬು ಕರಗುವುದು. ದೇಹ ಹಗುರವಾಗುವುದು. ಜಠರ ದೋಷಗಳು ನಿವಾರಣೆಯಾಗುವುವು. ಹೃದಯರೋಗ ರಕ್ತದೊತ್ತಡ ಗುಣವಾಗುವುವು. ಕಣ್ಣಿನ ದೃಷ್ಟಿಯು ಉತ್ತಮಗೊಳ್ಳುವುದು. ನರಗಳ ದೌರ್ಬಲ್ಯ ನೀಗುವುದು. ಅಜೀರ್ಣ, ಹೊಟ್ಟೆನೋವು, ಮಲಬದ್ಧತೆ ನಿವಾರಣೆಯಾಗುವುವು.

ಬೆಳ್ಳುಳ್ಳಿರಸ ಅಥವಾ ಸಿಪ್ಪೆ ತೆಗೆದ ಬೆಳ್ಳುಳ್ಳಿಯನ್ನು ಚೆನ್ನಾಗಿ ಅರೆದು, ಹರಳೆಣ್ಣೆ ಇಲ್ಲವೆ ಎಳ್ಳೆಣ್ಣೆಯಲ್ಲಿ ಬೆರೆಸಿ, ಕುದಿಸಿ ಊತ ನೋವುಗಳಿದ್ದ ಜಾಗಕ್ಕೆ ಲೇಪನಮಾಡಿ ನೀವಿ ಮಸಾಜ್ ಮಾಡಬೇಕು. 3-4 ಗಂಟೆಗಳ ನಂತರ ಅಗತ್ಯ ಕಂಡುಬಂದರೆ ಬಿಸಿ

[ಮುಂದಿನ ಪುಟ ನೋಡಿ]

ನಿಮ್ಮ ಪತ್ರಗಳು

ದೋಣಿ ಸಾಗಲಿ...ಮುಂದೆ ಹೋಗಲಿ......

ಮಾನ್ಯರೆ,

ಈ ಬಾರಿ ರಜೆಯಲ್ಲಿ ಮನೆಗೆ ಬಂದಾಗ 'ಕೊಡಗು ಸಂಗಾತಿ' ಎಂಬ ಹೊಸ ಪುಸ್ತಕದತ್ತ ಗಮನ ಸೆಳೆಯಿತು. ಗೌಡಜನಾಂಗದ ಒಂದು ಪತ್ರಿಕೆ ಹೊರಬರುತ್ತಿದೆ ಎಂದು ತಿಳಿದು ಬಾರಿ ಸಂತೋಷ ವಾಯಿತು. ಅಭಿಮಾನದ ಜಲಪಾತ ಬೋರ್ಗರೆದು ಉಕ್ಕಿ ಹರಿಯಿತು. ಮನೆಯಲ್ಲಿ ಶೇಖರಿಸಿಟ್ಟಿದ್ದ ಹಳೆ ಸಂಚಿಕೆಗಳ ಪುಟಗಳನ್ನೆಲ್ಲಾ ಆಸಕ್ತಿಯಿಂದ ತಿರುವಿಹಾಕಿದೆ. ನಮ್ಮ ಜನಾಂಗದ ಸಂಪ್ರದಾಯದ ಬಗ್ಗೆ ಹಲವಾರು ವಿಷಯಗಳು ಗೋಚರವಾಯಿತು. ಮದೆ ಜೋಯಪ್ಪರವರ ಅರೆಭಾಷೆ ಲೇಖನಗಳು ಮನಸೂರೆಗೊಂಡವು.

ಧೈರ್ಯದಿಂದ ಈ ಒಂದು ಕಠಿಣವಾದಂತ ಮಹಾನ್ ಕಾರ್ಯಕ್ಕೆ ನೀವು ಕೈ ಹಾಕಿದ್ದೀರ. ತುಂಬಾ ಶ್ಲಾಘನೀಯ. ನಿಮ್ಮ ಪ್ರಯತ್ನ ಮುಂದುವರಿಯಲಿ. ಪತ್ರಿಕೆ ನಡೆಸಲು ಬೇಕಾಗುವ ಎಲ್ಲಾ ತರದ ಸಹಕಾರ, ಪ್ರೋತ್ಸಾಹ ನಿಮಗೆ ದೊರೆಯಲಿ. ಜನಾಂಗದವರ ಮನೆ-ಮನೆಯಲ್ಲೂ ಈ ಪತ್ರಿಕೆ ಪ್ರಜ್ವಲಿಸಲಿ. ಆ ಮೂಲಕ ಮೊಗ್ಗಿನಂತಿರುವ ನಮ್ಮ ಜನಾಂಗದವರ ಪ್ರತಿಭೆಗಳು ನಿಮ್ಮ ಪತ್ರಿಕೆಯ ಮೂಲಕ 'ಹೂವಾಗಿ' ಅರಳಿ ಪರಿಮಳ ಸೂಸಲಿ.

ನಮ್ಮ ಸಂಸ್ಕೃತಿಯ ಪರಿಚಯ, ನಮ್ಮ ಹಿರಿಯರು ತಮ್ಮ ಕಾಲದಲ್ಲಿ ಅನುಭವಿಸಿದ ಸಿಹಿ-ಕಹಿ ಘಟನೆಗಳು, ಹಲವು ದಶಕಗಳ ಹಿಂದೆ ಅವರು ಅನುಭವಿಸಿದ ಕಷ್ಟ ಕಾರ್ಪಣ್ಯ ದಿನಗಳ ನೆನಪು, ನಮ್ಮಲ್ಲಿನ ವಿಶೇಷ ಹಬ್ಬಗಳು, ಅವುಗಳ ಹಿನ್ನೆಲೆ ಆಚರಣೆ, ನಂಬಿಕೆ, ಸಂಪ್ರದಾಯಗಳು ಹಾಗೂ ಅವುಗಳಿಗೆ ಹೊಂದುವ ವೈಜ್ಞಾನಿಕ ವಿವರಣೆ, ಅರೆಭಾಷೆಯ ವಿವರವಾದ ಪರಿಚಯ- ಇತ್ಯಾದಿ ಅಂಶಗಳು ಪತ್ರಿಕೆಯಲ್ಲಿ ಬೆಳಕು ಚೆಲ್ಲಲಿ.

○ **ಡಾ|| ಎನ್. ಎಸ್. ಪ್ರವೀಣ [ಎಂ.ಡಿ.]** ಮಡಿಕೇರಿ

ದಾರಿ ದೀಪವಾಗಲಿ

ಇಂದ್ ನಮ್ಮ ಅರೆಭಾಷೆ, ಸಂಸ್ಕೃತಿ ಕಣ್ಣ್ ಮುಂದೆ ಮರೆಯಾಗ್ತ ಉಟ್ಟು. ಹಂಗೆ ಆಕಾಗದ್. ಇನ್ನ್ ಮುಂದಕ್ಕೆ ಬರೋಕು ತೇಳಿ ಬಾರೀಪ್ರಯತ್ನಪಟ್ಟ್ ನಮ್ಮ ಗೌಡ ಜನಾಂಗಕ್ಕೊಂದು ದೊಂದಿನಂಗೆ ಬೆಳ್ಕ್ ಹಿಡ್ದ್ ದಾರಿ ತೋರ್ಸಿದಂಗೆ ಭಾಷೆ, ಸಂಸ್ಕೃತಿನ ಉಳ್ಸಿ ಬೆಳ್ಸ್‌ವ ಗುರಿ ಹೊತ್ತ್ ಬಂದ ಕೊಡಗು ಸಂಗಾತಿ ಎಲ್ಲೂ ಎಡವದೆ ಮುಂದೆ ಹೋಗಲಿ. ಇಂದ್ ನಮ್ಮ ಗೌಡ ಜನಾಂಗಲಿ ಬೆಳೆಯುವ ನಮ್ಮಂಥ ಮಕ್ಕಳಿಗೆ ದಾರಿದೀಪ ಆಗಲಿಂತೇಳಿ ನಾ ಹಾರೈಸಿನೆ.

○ **ಅಣ್ಣೆಚ್ಚೀರಾ ಭಾರತಿ ಸೋಮಣ್ಣ**, ಮಕ್ಕಂದೂರು

[ಹಿಂದಿನ ಪುಟದಿಂದ]

ಬೆಳ್ಳುಳ್ಳಿ ಮಹತ್ವ

ನೀರಿನಿಂದ ತೊಳೆದುಕೊಳ್ಳಬೇಕು. ಹೊತ್ತಿಗೆ ಮುಂಚೆ ಎದ್ದು ಈ ತೈಲ ಮಿಶ್ರಣವನ್ನು ಲೇಪಿಸಿಕೊಂಡು 2-3 ಗಂಟೆಗಳ ನಂತರ ಸ್ನಾನ ಮಾಡಬಹುದು. ಇದರಿಂದ ಸಂಧಿವಾತ, ಸೊಂಟ, ಬೆನ್ನು, ತೊಡೆಗಳ ನೋವು, ಊತಗಳು ಶಮನವಾಗುವುವು ಮತ್ತು ಅನೇಕ ಚರ್ಮ ರೋಗಗಳು ನಿವಾರಣೆಯಾಗುವುವು.

ಬೆಳ್ಳುಳ್ಳಿ ರಸವು ಕ್ಷಯ ರೋಗವನ್ನು ತರುವ ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಶಕ್ತಿಯನ್ನು ಪಡೆದಿದೆ.

ಒಂದು ಬೆಳ್ಳುಳ್ಳಿ ಗೆಡ್ಡೆಯನ್ನು ಹಾಲಿನಲ್ಲಿ ಕುದಿಸಿ ಸೋಸಿಕೊಂಡು ಸಕ್ಕರೆ ಬೆರೆಸಿ ಮಲಗುವುದಕ್ಕೆ ಮುಂಚೆ ಕುಡಿಯುವುದರಿಂದ ರಕ್ತದ ಒತ್ತಡ ಸಾಮಾನ್ಯಸ್ಥಿತಿಗೆ ಬರುತ್ತದೆ. ದೇಹಕ್ಕೆ ಚೈತನ್ಯ ಬರುತ್ತದೆ. ನರನಾಡಿಗಳು ಶಕ್ತಿಯುತವಾಗಿ ಲಕ್ವ ಪಾರ್ಶ್ವವಾಯು ಹತೋಟಿಗೆ ಬರುತ್ತದೆ.

—ಆಧಾರ

[13 ನೇ ಪುಟದಿಂದ]

ಡಾ|| ಬೆಸಗರಹಳ್ಳಿ ರಾಮಣ್ಣ ಇನ್ನಿಲ್ಲ

ವು ಕಾರಣವಾಗಿತ್ತಲ್ಲದೆ, ಜನಾಂಗದ ಪತ್ರಿಕೆಯಾಗಿ ಸಂಗಾತಿ ಹುಟ್ಟಿ ಬರುವುದಕ್ಕೆ ಮುಖ್ಯ ಪ್ರೇರಣಾ ಶಕ್ತಿಯಾಗಿದ್ದ ಇವರ ಪರಿಚಯವನ್ನು ಅರೆಭಾಷಿಕರಿಗೆ ಪರಿಚಯಿಸುವ ಮೂಲಕ ' ಕೊಡಗು ಸಂಗಾತಿ' ಇವರ ಅಕಾಲ ಮರಣಕ್ಕೆ ಹೃದಯ ತುಂಬಿ ಅರೆಭಾಷಿಕರ ಪರವಾಗಿ ಕಂಬನಿಮಿಡಿಯುತದೆ ಹಾಗೂ ಇವರ ಕಥೆಗಳ ಸಂಕಲನವನ್ನು ಗೌಡ ಸಾರಸ್ವತ ಲೋಕದ ಪುಸ್ತಕ ಭಂಡಾರದಲ್ಲಿರಿಸಿ, ಅರೆಭಾಷಿಕ ಗೌಡ ಜನಾಂಗದ ಕಿರಿಯರಿಗೆ ಜ್ಞಾನದ ದಾರಿದೀಪವಾಗಲೆಂಬುದಾಗಿಯೂ ಸಹ **"ಕೊಡಗು ಗೌಡ ವಿದ್ಯಾ ಸಂಘ ಮಡಿಕೇರಿ"** ಇವರನ್ನು ಈ ಸಂದರ್ಭದಲ್ಲಿ ಸಂಗಾತಿಯು ಜನಾಂಗದ ಪರವಾಗಿ ವಿನಂತಿಸಿಕೊಳ್ಳುತ್ತದೆ.

○ **ಸಂಗಾತಿ**

ನಿಧನ

ಹೆರವನಾಡು ಗ್ರಾಮದ ಮೊಟ್ಟೆರ ಬೋಪಯ್ಯನವರ ಮಗ ಮಂದಣ್ಣ [ಡಾಲಿ] ಇವರು ಜುಲೈ 10 ರಂದು ಹೃದಯಾಘಾತದಿಂದ ನಿಧನರಾದರೆಂದು ತಿಳಿದುಬಂದಿದೆ. ಇವರಿಗೆ 50 ವರ್ಷ ವಯಸ್ಸಾಗಿತ್ತಲ್ಲದೆ ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ. ಇವರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು "ಕೊಡಗು ಸಂಗಾತಿ" ಕೋರುತ್ತದೆ.

ಮನುಷ್ಯಂಗೆ ಆಯುಷ್ಯ ಎಷ್ಟ್ ?

ಅರೆ ಭಾಷಿಕ ವಿಭಾಗ

ಮನುಷ್ಯನ ಆಸೆಗೆ ಮಿತಿಯೇ ಇಲ್ಲೆಂತೇಳುದು ಎಲ್ಲವುಕು ಗೊತ್ತಿರುವ ವಿಚಾರ. ಹಣ್ಣ್ ಹಣ್ಣ್ ಅಜ್ಜ ಆದರೂ ನನ್ನ ಕಡೇ ಪಿಳ್ಳೆನ ತಲೆಗೆ ಅಕ್ಕಿಹಾಕಿ ಸಾಯೋಕುಂತೇಳಿ ಆಸೆ ಪಟ್ಟವೆ. ಆದರೆ ಇಂದ್ ಇದ್ದ ಮನುಷ್ಯ ನಾಳೆ ಇದ್ದದೆತ ಹೇಳಿಕೆ ಆದುಲೆ, ಆದರೂ ಹುಟ್ಟಿದ ಮನುಷ್ಯ ಸಾಯೊದರೊಳಗೆ ಮನುಷ್ಯನ ವಯಸ್ಸ್‌ಗೆ ತಕ್ಕಂತೆ ಜೀವನದ ಪ್ರತಿಯೊಂದು ಚಟುವಟಿಕೆಲೂ ಕೂಡ ಅನೇಕ ರೀತಿ ಬದಲಾವಣೆಗ ನಡೆಯುತ್ತಿದ್ದವೆ. ಹಿಂದೆಲ್ಲಾ ಒಂದು ಕೂಸು ಹುಟ್ಟಿದಂಗೆ ಅದರ ಜಾತಕ ಬರ್ಸ್ತಿದ್ದೊ. ಇಷ್ಟೇ ವಯಸ್‌ಗೆ ಇಂತಹ ಕಂಟಕ ಉಟ್ಟು, ಇಷ್ಟೇ ನಿನ್ನ ಆಯುಷ್ಯತೇಳುದರ ಕೂಡ ಜೋತಿಷ್ಯನತ್ರ ಬರ್ಸ್ತಿದ್ದೊ ಅದಿಕೆ ಸರಿಯಾಗಿ, ತಾತಿ, ನೂಲು, ಶನಿಪೂಜೆ, ಆಪೂಜೆ, ಈಪೂಜೆ ಮಾಡಿಕಂಡ್ ಬರ್ತ್ತಿದ್ದೊ. ಇದ್ ಎಷ್ಟರಮಟ್ಟಿಗೆ ಸತ್ಯನೋ ದೇವ್ರ್‌ಗೆ ಗೊತ್ತು. ಕೆಲವರಲ್ಲಿ ಜಾತಕ ನೋಡುದು ಈಗಲೂ ನಡ್ದ್ ಬಂದುಟು. ಒಂದು ಕೂಸು ಹುಟ್ಟ್‌ಕಾಕನೆ ಆ ಕೂಸುನ ಆಯುಷ್ಯ ಇಷ್ಟೆಂತೇಳಿ ಬ್ರಹ್ಮದೇವ ಬರೆದಿದ್ದದೆಂತೇಳುದು. ಪ್ರತಿಯೊಬ್ಬರಲ್ಲೂ ಬಾಯಿ ಮಾತ್. ಆದರೆಅದೇ ಹೆಚ್ಚ್ಂತೇಳಿ ಬದುಕುವ ಮನುಷ್ಯನ ಆಯುಷ್ಯ ಎಷ್ಟ್? ಇಷ್ಟ್ ಆಯುಷ್ಯ ಮನುಷ್ಯಂಗೆ ಹೆಂಗೆ ಬಾತ್‌ಂತೇಳುದರ ಬಗ್ಗೆ ತಿಳ್‌ಕಣುವ ಹಂಬಲ ಇದ್ದರೆ ಅಜ್ಜ ಹೇಳಿಕೊಟ್ಟ ಅಜ್ಜಿ ಕಥೆನ ಮುಂದೆ ಓದಿ.

ಪ್ರಾಣಿಗಳಿಗೆ ಬಾಯಿ ಬರ್ತ್ತಿದ್ದ ಕಾಲಲೊಮ್ಮೆ ಮನುಷ್ಯ ದನ, ನಾಯಿ, ಗುಮ್ಮ ಹಾವು ಇವು ಎಲ್ಲವು ಸೇರಿ ಬ್ರಹ್ಮದೇವನತ್ರ ಆಯುಷ್ಯ ಕೇಳಿಕೆ ಹೋದವೆ. ಎಲ್ಲವರ್ನ ಹೊರಗಡೆ ಕೂರಿಸಿ, ಒಂದನೆದಾಗಿ ಮನುಷ್ಯನ ಒಳಗಡೆ ಬ್ರಹ್ಮದೇದನತ್ರ ಕರ್ದವೆ. ಆಗ ಬ್ರಹ್ಮದೇವ "ಏನ್, ಎಲ್ಲವು ಒಂದೆ ಸಲ ಬಂದ್‌ಬುಟ್ಟೊಳರಿ, ಏನ್ ಸಮಾಚಾರತ ಕೇಳ್ತ್. ಆಗ ಮನುಷ್ಯ ನಾವೆಲ್ಲ ನಮ್ಮ ನಮ್ಮ ಆಯುಷ್ಯ ಕೇಳಿಕೆ ಬಂದದ್, ನನ್ನ ಆಯುಷ್ಯ ಎಷ್ಟಂತ್ ಕೇಳ್ತ್, ಆಗ ಬ್ರಹ್ಮದೇವ ನಿಂಗೆ ನಲ್ಪತ್ ವರ್ಷ ಆಯುಷ್ಯ ಹೋಗ್‌ಂತೇಳ್ತ್. ಈ ವಯಸ್ಸ್ ಮನುಷ್ಯಂಗೆ ಏನು ಸಾಕಾತ್‌ಲೆ. ಆಗ ಮನುಷ್ಯ ಹೋಮ್‌ವರ್ಕ್ ಮಾಡದೆ ಕ್ಲಾಸ್‌ಗೆ ಬಂದ ಹೈದ ಮಾಸ್ಟ್ರ ಎದುರುಗಡೆ ತಲೆತಗ್ಗಿಸಿ ನಿತ್ತಂಗೆ ನಿಂತವರ ನೋಡಿ ಬ್ರಹ್ಮದೇವ ಇವಂಗೆ ಇಷ್ಟಕ್ಕೆ ತೃಪ್ತಿ ಆತ್‌ಲೆಂತೇಳಿ ಗೊತ್ತಾಗಿ ಸ್ವಲ್ಪ ಹೊತ್ತು ಹೊರಗೆ ಕುದ್ದ್‌ಕಂತೇಳ್ಟ್.

ಎರಡನೆದಾಗಿ ಬ್ರಹ್ಮದೇವದನನ ಕರ್ದದೆ. ದನಕ್ಕೂ ಕೂಡ ಅದೇ ರೀತಿ ನಲ್ಪತ್ತ್ ವರ್ಷ ಆಯುಷ್ಯ ಕೊಟ್ಟದೆ, ಆಗ ದನ ನಂಗೆ ನಲ್ಪತ್ ವರ್ಷ ಆಯುಷ್ಯ ಬ್ಯಾಡ, ಬರಿ ಇಪ್ಪತ್ತ್ ವರ್ಷ ಸಾಕ್, ಗದ್ದೆ ಹೂಡುವೆ, ಒಕ್ಕಲು ಹೊಡ್ಡವೆ ಗಾಡಿ ಎಳೆಯಕು, ಕಾಡ್‌ಲಿ ಕುಂದುಲಿ ಮಳೆ ಬಿಸಿಲ್‌ಲಿ ಮೇದ್ ಬರಕು, ಬದ್‌ಕ್ ತುಂಬಾ ಕಷ್ಟ. ಆದ್ದರ್‌ಂದ ನಂಗೆ ಬರಿ ಇಪ್ಪತ್ತ್ ವರ್ಷ ಆಯುಷ್ಯ ಮಾತ್ರ ಸಾಕ್‌ಂತೇಳಿ ದನ ಬ್ರಹ್ಮದೇವನಲ್ಲಿ ಬೇಡಿಕಂಡ್ ಹೋದೆ. ಆಗ ಬ್ರಹ್ಮದೇವ ಉಳಿದ ಇಪ್ಪತ್ ವರ್ಷ ದನದ ಆಯುಷ್ಯನ ಹೊರ್ಗೆ ಕೈಕಟ್ಟಿ ಕುದ್ದಿರುವ ಮನುಷ್ಯನ ಕರ್ದ್ ಕೊಟ್ಟದೆ. ಅಲ್ಲಿಗೆ ಮನುಷ್ಯಂಗೆ ಅರವತ್ತ್ ವರ್ಷ ಆಯುಷ್ಯ ಆತ್. ಈ ನಲ್ಪತ್ತ್ ವರ್ಷಂದ ಅರ್‌ವತ್ತ್ ವರ್ಷಗಳವರೆಗೆಮನುಷ್ಯನ ಚಟುವಟಿಕೆ ದನಗಳಂಗೆ. ಅಲ್ಲಿ ಇಲ್ಲಿ ಸೋಮಾರಿಗಳಂಗೆ ಸುತ್ತಾಡಿಕಂಡ್ ಇದ್ದ್, ಈ ವಯಸ್ಸ್‌ಲಿ ಮಕ್ಕ ಎಲ್ಲವು ದೊಡ್ಡದಾಗಿ ನಂಗೇನ್ ಮಾಡಿಟ್ಟಳೊತ್ತ ಅಪ್ಪನ ಕೇಳ್‌ಕಾಕನ, ದನಗ ದುಡ್ದಂಗೆ ದುಡ್ದ್ ಜೋರಾಗಿ ತೋಟ ಮಾಡ್ದು ಈ ವಯಸ್ಸ್‌ಲಿ. ಹಿಂಗೆ ಮನುಷ್ಯಂಗೆ ಇಷ್ಟ್ ವರ್ಷ ಆಯುಷ್ಯ ಕೊಟ್ಟರೂ ತೃಪ್ತಿ ಆತ್‌ಲೆ. ಆಗ ಬ್ರಹ್ಮದೇವ ಸ್ವಲ್ಪ ಹೊರಗಡೆ ಕುದ್ದ್‌ಕಂತೇಳಿ ಮೂರನೆದಾಗಿ ನಾಯಿನ ಕರ್ದದೆ, ನಾಯಿಗೂ ಕೂಡ ನಲ್ಪತ್ ವರ್ಷ ಆಯುಷ್ಯ ಕೊಟ್ಟದೆ, ಆಗ ನಾಯಿ ನಂಗೆ ಇಷ್ಟ್ ವರ್ಷ ಆಯುಷ್ಯ ಬ್ಯಾಡ. ಬರಿಇಪ್ಪತ್ತ್ ವರ್ಷಮಾತ್ರ ಸಾಕ್. ನಾನ್ ರಾತ್ರಿ ಇಡೀ ಮನೆ ಕಾಯಕು, ಬೆಳಿಗ್ಗೆ ಕಟ್ಟಿ ಹಾಕಿರೆ ಸಾಯಂಕಾಲೇ ನನ್ನ ಬುಡ್ದು. ಇನ್ನ್ ಮಳೆಗಾಲಲಿ ಏಲಕ್ಕಿ ತೋಟಲಿ ಕಟ್ಟಿ ಹಾಕಿವೆ. ಅಲ್ಲಿ ಉಂಬಳು ಕಚ್ಚಿರು ನಂಗೆ ತೆಗಿಯಕೆ ಆದುಲೆ. ಅದರ್‌ಂದ ನಂಗೆ ಬರಿ ಇಪ್ಪತ್ ವರ್ಷ ಸಾಕ್‌ಂತೇಳಿ ಹೊರಟ್ ಹೋದೆ. ಆಗ ಬ್ರಹ್ಮದೇವ ಹೊರಗೆ ಕುದ್ದ್‌ಕಂಡಿರುವ ಮನುಷ್ಯನ ಕರ್ದ್ ಈ ನಾಯಿನ ಇಪ್ಪತ್ತ್ ವರ್ಷ ಆಯುಷ್ಯನ ಮನುಷ್ಯಂಗೆ ಕೊಟ್ಟದೆ. ಅಲ್ಲಿಗೆ ಮನುಷ್ಯಂಗೆ ಎಂಬತ್ತ್ ವರ್ಷ ಆಯುಷ್ಯ ಆತ್. ಈ ಅರವತ್ತರ್‌ಂದ ಎಂಬತ್ತರವರೆಗಿನ ವಯಸ್ಸ್‌ಲಿ ಮನುಷ್ಯಂದ್ ನಾಯಿದ್ ಚಟುವಟಿಕೆ. ಮನುಷ್ಯಂಗೆ ಈ ವಯಸ್ಸ್‌ಲಿ ಕೆಲ್ಸ ಮಾಡಿಕೆ ಆದುಲೆ. ಆದರೆ ಒಳ್ಳೊಳ್ಳೆ ಗದ್ದಳ ತಿನ್ನುವ ಆಸೆ. ಯಾರಾರ್ ಎಂತಾರ್ ಮಾತಾಡ್ರೆ ಬ್ಯಾಗ ಸಿಟ್ಟ್ ಬಾದು, ಸೊಸೆಕಳ ಕಂಡರೆ ಪಿರಿಪಿರಿತೆಳ್ದು, ಪಿಳ್ಳೆಕಳ ಕಂಡರೆಚೈಚೈ ತೇಳ್ದ್ ದೊಡ್ಡ ಮಜ ಬೈದರೆ ಸಣ್ಣ ಮಜನ ಮನೆಗೆ, ಸಣ್ಣ ಮಜ ಬೈದರೆ ನೆಂಟ್ರಮನೆ ಸುತ್ತಿಕಂಡ್ ನಾಯಿತರ ಚಟುವಟಿಕೆ ಆಡುದು ಈ ವಯಸ್ಸ್‌ಲಿ. ಇಷ್ಟ್ ಆಯುಷ್ಯ ಕೊಟ್ಟರು ಮನುಷ್ಯಂಗೆ ತೃಪ್ತಿ ಆತ್ಲೆ. ಪುನಃ ಸ್ವಲ್ಪ ಹೊರಗಡೆ ಕುದ್ದ್‌ಕಂತೇಳಿ

ನಂತರ ಬ್ರಹ್ಮದೇವ ಗುಮ್ಮನ ಕರ್ದದೆ. ಗುಮ್ಮಂಗು ಎಲ್ಲವರಂಗೆ ನಲ್ವತ್ತ್ ವರ್ಷ ಆಯುಷ್ಯ ಕೊಟ್ಟದೆ. ಆಗ ಗುಮ್ಮ ನಂಗೆ ಇಪ್ಪತ್ತ್ ವರ್ಷಆಯುಷ್ಯ ಮಾತ್ರ ಸಾಕ್. ನಂಗೆ ಹಗ್‌ಲ್ ಕಣ್ಣ್ ಕಾಂಬದುಲೆ, ಮನುಷ್ಯರ್ ಕಂಡರೆ ಹೊಡ್ದ್ ತಿಂದ್ ಬುಟ್ಟವೆ, ರಾತ್ರಿ ಮಾತ್ರ ಓಡಾಡಕು. ಆದ್ದರ್‌ಂದ ನಂಗೆ ಇಪ್ಪತ್ತ್ ವರ್ಷ ಆಯುಷ್ಯ ಮಾತ್ರ ಸಾಕ್‌ಂತೇಳಿ ಬೇಡಿ ಕಂಡ್ ಹೋದೆ. ಆಗ ಬ್ರಹ್ಮದೇವ ಈ ಇಪ್ಪತ್ತ್ ವರ್ಷ ಗುಮ್ಮನ ಆಯುಷ್ಯನ ಮನುಷ್ಯಂಗೆ ಕೊಟ್ಟತ್. ಇಲ್ಲಿಗೆ ಮನುಷ್ಯಂಗೆ ನೂರುವರ್ಷ ಆಯುಷ್ಯ ಆತ್. ಈ ಎಂಬತ್ತ್ ವರ್ಷದಿಂದ ನೂರ್ ವರ್ಷ ವಯಸ್ಸ್‌ಲಿ ಮನುಷ್ಯಂದ್ ಗುಮ್ಮನತರ ಚಟುವಟಿಕೆ. ಈ ವಯಸ್ಸ್‌ಲಿ ಮನುಷ್ಯ ಅಜ್ಜ ಆಗಿ ಕಣ್ಣ್ ಉಜ್ಜಿಕಂಡ್, ಯಾರಾರ್ ಮನೆಗೆ ನೆಂಟ್ರ್ ಬಂದರೆ "ಯಾರ್‌ನೆದ್ ಮನೆಗೆ ಬಂದ್ದದ್, ನಂಗೆ ಕಣ್ಣ್ ಕಾಂಬದುಲೆ" ತೇಳಿಕಂಡ್ ಮೆಲ್ಲೆ ಹೊರಗೆ ಒಳಗೆ ಓಡಾಡಿಕಂಡ್ ಗುಮ್ಮನಂಗೆ ಮೂಲೆಲಿ ಇದ್ದವೆ. ಇದ್ ಮನುಷ್ಯಂದ್ ಗುಮ್ಮನ ವಯಸ್ಸ್. ಇಷ್ಟ್ ಆಯುಷ್ಯ ಕೊಟ್ಟರೂ ಮನುಷ್ಯಂಗೆ ತೃಪ್ತಿ ಆತ್‌ಲೆ. ಆಗ ಬ್ರಹ್ಮದೇವ ಮನುಷ್ಯನ ಪುನಃ ಸ್ವಲ್ಪ ಹೊರಗಡೆ ಕೂರ್ಸಿದೆ. ಕಡೆಗೆ ಆಯುಷ್ಯ ಕೇಳಿಕೆ ಹಾವು ಬಂದ್ದದೆ, ಹಾವುಗೂ ಎಲ್ಲವರಂಗೆ ನಲ್ವತ್ತ್ ವರ್ಷ ಆಯುಷ್ಯ ಕೊಟ್ಟದೆ. ಆಗ ಹಾವು ನನ್ನ ದನ ನೋಡುವ ಮಕ್ಕಕಂಡರೆ ಹೊಡ್ದ ಹಾಕುವೆ. ಮಕ್ಕಳ ಕಣ್ಣ್ ತಪ್ಪಿಸಿರು, ಹದ್ದ್, ಗಿಡ್‌ಗ, ಕೀರಿ ಇವುಗಳ ಕಣ್ಣ್ ತಪಿಸಿಕಂಡ್ ಬದುಕುದು ತುಂಬಾ ಕಷ್ಟ. ಅದಾರ್‌ಂದ ನಂಗೆ ಇಪ್ಪತ್ತ್ ವರ್ಷ ಆಯುಷ್ಯ ಮಾತ್ರ ಸಾಕ್‌ಂತೇಳಿ ಬೇಡಿಕಂಡ್ ಹೋತ್. ಕಡೆಗೆ ಬ್ರಹ್ಮದೇವ ಪುನಃ ಮನುಷ್ಯನ ಕರ್ದ್ ಈ ಹಾವ್‌ನ ಇಪ್ಪತ್ತ್ ವರ್ಷ ಆಯುಷ್ಯನ ಮನುಷ್ಯಂಗೆ ಕೊಟ್ಟತ್, ಇಲ್ಲಿಗೆ ಮನುಷ್ಯಂಗೆ ನೂರ್‌ಇಪ್ಪತ್ತ್ ವರ್ಷ ಆಯುಷ್ಯ ಆತ್. ಈ ನೂರರಿಂದ ನೂರಇಪ್ಪತ್ತ್ ವರ್ಷ ವಯಸ್ಸ್‌ಲಿ ಮನುಷ್ಯನ ಚಟುವಟಿಕೆ ಹಾವುನ ರೀತಿ ಇದ್ದದೆ. ಈ ವಯಸ್ಸ್‌ಲಿ ಮನುಷ್ಯ ಹಣ್ಣ್ ಹಣ್ಣ್ ಅಜ್ಜ ಆಗಿ ಹಾವುನಂಗೆ ಬಿದ್ದ್ ಕಂಡ್, ಹರ್‌ಕಂಡ್ ನಡಿಯದು, ಯಾರ್ ಇಲ್ಲದಿರ್‌ಕಾಕನ ಹಾಸಿಗೆಂದ ಎದ್ದ್ ಬೀಳುದು, ಹಾವುನಂಗೆ ಹೊಸಮರಿ ಹಲ್ಲ್‌ಬಾದು ಈ ವಯಸ್‌ಲಿ. ಹಿಂಗೆ ಮನುಷ್ಯಂಗೆ ದನ, ನಾಯಿ, ಗುಮ್ಮ ಹಾವು ಎಲ್ಲವರ ಆಯುಷ್ಯ ಸೇರಿ ಒಟ್ಟು ನೂರಇಪ್ಪತ್ತ್ ವರ್ಷ ಆಯುಷ್ಯ.

○ ಅಮೆ ಬೆಳ್ಳಪ್ಪ ಶೇಖರ,
ಚೆಟ್ಟಿಮಾನಿ

ಶುಭಕಾಮನೆಗ

ಶ್ರೀಮತಿ ಇಂದಿರಾ ಮತ್ತೆ ಶ್ರೀ ಎನ್. ಎಸ್. ದೇವಿಪ್ರಸಾದ್, ಸಂಪಾಜೆ ಇವರ ಮಗ ಪ್ರಜ್ಞಾ ಮತ್ತೆ ಅರುಣ್ [ಶ್ರೀಮತಿ ರತ್ನ ಮತ್ತೆ ಶ್ರೀ ಡಿ. ಎ. ಧನಂಜಯ್ಯ ಇವರ ಮಗ] ಇವರ ಮದುವೆ 6ನೇ ಜುಲೈ 1998ರ ಸೋಮವಾರ ಅಶೋಕ ಹೋಟ್ಲ್, ಬೆಂಗ್ಳೂರು ಇಲ್ಲಿ ನಡ್ತ್. ಈ ನವ ಜೋಡಿಗಳಿಗೆ "ಕೊಡಗು ಸಂಗಾತಿ"ನ ಶುಭಕಾಮನೆಗ.

ಇನ್ನು ಮುಂದೆ ಕೊಡಗು ಸಂಗಾತಿ ಪತ್ರಿಕೆ ಇಲ್ಲ

ಕೆಲವು ತಿಂಗಳುಗಳಿಂದ ಜ್ಞಾಪನಾ ಪತ್ರವನ್ನು ಕಳುಹಿಸಿದರೂ ಸಹ "ಕೊಡಗು ಸಂಗಾತಿ"ಯ ಚಂದದಾರರಾಗದೇ ಇರುವವರಿಗೆ ತಾ॥ 1-8-1998 ರಿಂದ ಅಂದರೆ, ಆಗಸ್ಟ್ ತಿಂಗಳಿಂದ ಪತ್ರಿಕೆಯನ್ನು ಕಳುಹಿಸಲಾಗುವುದಿಲ್ಲ. ನವೀಕರಣ ಬಯಸುವವರು ಮೇಲೆ ಸೂಚಿಸಿರುವ ದಿನಾಂಕದೊಳಗೆ ಚಂದದಾರರಾಗದಿದ್ದರೆ 'ಕೊಡಗು ಸಂಗಾತಿ ಪತ್ರಿಕೆ ನಿಮ್ಮ ಮನೆಗೆ ಬರುವುದಿಲ್ಲ. ಕ್ಷಮಿಸಿ, ಈವರೆಗೆ ಚಂದ ಹಣ ಕೊಡದೇ ಓದಿದವರು ಸಾಧ್ಯವಾದರೆ ಕಳುಹಿಸಿ ಕೊಡಿ.

ಸಂಪಾದಕಿ ಮತ್ತು ಪತ್ರಿಕಾ ಬಳಗ

ಬೇಬಿ ಗೂಡೆಗೆ ಸೋಂಕುಗಡ

ನಾನ್ ಮೊನ್ನೆ ನಮ್ಮ ಊರ್ಲಿ ಮೊದುವೆಗೆ ಹೋಗಿದ್ದೆ ಆತಾ. ನನ್ನೊಟ್ಟಿಗೆ ಬೇಬಿ, ಬೇಬಿನ ಅಮ್ಮ ಸಹಾ ಮೊದುವೆಗೆ ಬಂದಿದ್ದೊ. ಮೊದುವೆ ಮನೆಲಿ ಜನ ತುಂಬಾ ಸೇರಿದ್ದೊ. ಮೊದುವೆ ಮನೆ ತೇಳ್ರೆ ಹಂಗೆ ತಾನೆ ? ಅಜ್ಜಂಗ, ಅಜ್ಜಿಕ, ಹೆಣ್ಮಕ್ಕ, ಗಂಡ್ಮಕ್ಕ, ಗೂಡೆಗ, ಹೈದಂಗ, ಮಕ್ಕ, ಮರಿ ಎಲ್ಲವೂ ಮೊದುಮಕ್ಕಳಂಗೆ ಲಾಯ್ಕ ಬಟ್ಟೆಗಿಟ್ಟೆ ಎಲ್ಲ ಹಾಕಂಡ್ ಬಂದಿದ್ದೊ. ಎಲ್ಲವುಕೂ ಕುಸಿಯೋ ಕುಸಿ. ನಾವ್ ಹೋಕನ ಮಧ್ಯಾಹ್ನ ಹನ್ನೊಂದು ಗಂಟೆ ಆಗುಟು. ನಾವು ಹೋಗಿ ಸ್ವಲ್ಪ ಹೊತ್ತಿಗೆ ಮೊದುಮಗಳ ಮೂರ್ತಕ್ಕೆ ಕೂರ್ಸಿದೊ.

ಎಲ್ಲವು ಕವರ್ ಕೊಡಿಕೆ ಎದ್ದೊ. ನಾನ್ ಬೇಬಿನ ಒಟ್ಟಿಗೆ ಹೇಳ್ದೆ "ನಾವೂ ಪೋಯಿ ಬೇಬಿ. ಕವರ್ ಕೊಟ್ಟ್ ಬೇಗ ಉಂಡ್ ಮನೆಗೆ ಪೋಯಿ. ನಂಗೆ ಇಂದ್ ನೆಂಟ್ರ್ ಬೇರೆ ಬಂದವೆ." ಹೂಂ ಅತ್ತಿಗೆ ಅಂತ ತಲೆ ಅಲ್ಲಾಡ್ಸಿ ಗೂಡೆ ಹಂಗೇ ಬೆಂಚಿನ ಮೇಲೆ ಬಿತ್. 'ಅಯ್ಯೋ ರಾಮ ಇವ್ಳಿಗೆ ಏನಾತ್ ?' ಬೇಬಿನ ಅಮ್ಮ ಕೂಡಾ ಒಟ್ಟಿಗೆ ಒಳೊ. ನಾನ್ ಹೇಳ್ದೆ ಬೇಗ ಒಂದು ಗ್ಲಾಸ್ ನೀರ್ ತನ್ನಿ. ಯಾರೋ ನೀರ್ ತಂದೊ. ಮುಖಕ್ಕೆ, ತಲೆಗೆ ಎಲ್ಲಾ ನೀರ್ ಹಾಕಿ ಬಾಯಿಗೆ ಸ್ವಲ್ಪ ನೀರ್ ಹಾಕಿ ಆಕನ ಗೂಡೆ ಮೆಲ್ಲೆ ಕಣ್ಣ್‌ಬುಟ್ಟತ್. ಮತ್ತೆ ಮೆಲ್ಲೆ ಎದ್ದ್ ಕುದ್ದತ್. ಏನಾತ್ ಬೇಬಿ ತಲೆ ಮನಿ ತಿರ್ಗಿತಾ? ನಾನ್ ಕೇಳ್ದೆ. ಹೌದು ಅತ್ತಿಗೆ ಅಂತ ಬೇಬಿ ಹೇಳ್ತ್. ಅಷ್ಟಾಕನ ಅವಳ ಹತ್ರ ಕುದ್ದಿದ್ದ ಚಾಮೆವ್ವ ಹೇಳ್ದೊ, ಅಯ್ಯೋ ಪಾಪ ಗೂಡೆಗೆ ಎಂತದೋ ಸೋಂಕಿಕಂಡಿತ್ ಕಂಡದೆ, ಮನೆಗೆ ಹೋಗಿ ಒಂದು ತಾಯ್‌ತ ಕಟ್ಟಿಸಿ ದೃಷ್ಟಿ ತೆಗೆಸಿ ಅಂತ ಬೇಬಿನ ಅಮ್ಮನೊಟ್ಟಿಗೆ ಹೇಳ್ದೊ. ಅಷ್ಟಾಕನ ನಾನ್ ಹೇಳ್ದೆ ಸೋಂಕಿದಲ್ಲ, ಏನೂ ಅಲ್ಲ ಈ ಬಿಸಿಲಿಗೆ ತಲೆತಿರ್ಗಿತ್ ಕಂಡದೆ. ಸುಸ್ತಾಗುಟು ಏನೋ ? ಅಷ್ಟಾಕನ ಚಾಮೆವ್ವ ಹೇಳ್ದೊ ಎಂತ ಸುಸ್ತು ? ಈ ಗೂಡೆಗಳಿಗೆಲ್ಲ ? ಬೇಬಿ ಗೂಡೆ ಎಷ್ಟ್ ಲಾಯ್ಕ ಉಟ್ಟ್. ದಪ್ಪ, ದಪ್ಪ ಆಗಿ, ಬಿಳಿ ಆಗಿ ಎತ್ತರ ಆಗಿ ಲಾಯ್ಕ ಉಟ್ಟ್. ಎಲ್ಲೊ ಕಣ್ಣ್ ದೃಷ್ಟಿ, ಇಲ್ಲೇ ಸೋಂಕು ಆವುಟು ಅಷ್ಟೆ ಅಂತ ಚಾಮೆವ್ವ ಹಿಡ್ದ ಪಟ್ಟ್ ಬುಟ್ಟತ್‌ಲೆ. ಅಷ್ಟಾಕನ ಅಲ್ಲಿ ಸೇರ್ದ್‌ವು ಎಲ್ಲವೂ ಅದೇ ಸರಿ ಅಂತ ಒಪ್ಪಿಕೊಂಡೊ. ಅದೇಪ್ಪಾ ಬೇಬಿಗೆ ಎಂತದೋ ಸೋಂಕಿಟು, ಇನ್ನೊಂದು ಚಾಮೆವ್ವನೂ ಹೇಳ್ದೊ. ಅಷ್ಟಾಕನ ಬೇಬಿನ ಅಮ್ಮ ಹೇಳ್ದೊ, ಅವ್ಳಿಗೆ ಒಂದಲ್ಲ ಒಂದು ಉಟ್ಟೇ ಉಟ್ಟ್. ಮುಂದೆ ಸರೀ ಇತ್ತ್. ಈಗ ದೊಡ್ಡವಳಾಗಿ ಎರ್‌ಡ್ ವರ್ಷ ಆಕಂಡ್ ಬಾತ್. ಯಾಗೋಳು ಹಿಂಗೆ. ಈಗ ಅವಳಿಗೆ ಹದಿನಾರ್ ವರ್ಷ. ಎರ್‌ಡ್ ವರ್ಷಂದ ಮೂರ್ ನಾಕ್ ದಪ್ಪ ಹಿಂಗೆ ಸೋಂಕಿಟು. ಎಲ್ಲಿಗೂ ಕರ್‌ಕಂಡ್ ಹೋತ್ಲೆ ? ಅಂತ ಚಾಮೆವ್ವ ಕೇಳ್ದೊ. ಅಯ್ಯೋ ಮೂರು ನಾಲ್ಕ್ ಕಡೆ ಕರ್ ಕಂಡ್ ಹೋದೊ. ಅಲ್ಲಿ ಒಬ್ಬ ನಾಯ್ಕನ ಹತ್ರ ಕರ್‌ಕಂಡ್ ಹೋಗಿ ಮಂತ್ರ ಹಾಕ್ಸಿ ಬಸ್ಮ ನೂಲು ಅಂತ ಎಲ್ಲಾ ಆತ್. ಸೊಲ್ಪ ಗುಣ ಕಂಡತ್. ಪುನಃ ಹಂಗೇ ಆಕನ ಅಂವ ಒಬ್ಬ ಬ್ಯಾರಿ ಗಡ. ಬಾರಿ ಮಂತ್ರವಾದಿಗಡ. ಅಂವ ಸೋಂಕು ಎಲ್ಲ ತೆಗ್ದ್ ಬುಟ್ಟ್ ಹೇಳ್ತ್. ಒಂದು ಪೀಡೆ ಸೋಂಕಿತ್‌ತ ತಾಯತ ಕಟ್ಟಿ ಕೋಳಿ ತಲೆಕೊಯಿಸಿ, ದೃಷ್ಟಿ ತೆಗ್ಸೀತ್. ಎಲ್ಲಾ ಸರಿ ಅದೇತಾ ಹೇಳ್ತ್. ಹಂಗೆ ಮಾಡಿ ಆಕನ ಸ್ವಲ್ಪ ದಿನ ಸುದ್ದಿನೇ ಇತ್ಲೆ. ಪುನಃ ಒಂದು ದಿನ ಸೋಂಕಿ ಕಂಡತ್. ಮತ್ತೆ ಪುನಃ ಗೌಡ್ರ್ ನಮ್ಮವೇ, ಅವ್ರ ಹತ್ರ ಹೋದೊ. ಮಾತಾಡಿ, ಮಾತಾಡಿ ಆಕನ ಅವು ನಮಿಗೆ ನೆಂಟ್ರೇ ಆಕು. ಅವರ ಹೆಣ್ಣ್ ಮಂತ್ರಿಸಿ ನೀರೆಲ್ಲ ಹೊಯ್ದೊ. ಹಂಗೇ ಈಗ ಮೂರು ತಿಂಗಳ್‌ಂದ ಉಸಾರಿತ್‌ತ ಗೂಡೆ. ಈಗ ಪುನಃ ಸೋಂಕಿಕಂಡ್ ಎಲ್ಲಿ ಏನ್ ಮಾಡ್ದೊತ ಗೊತ್ತಾದುಲೆ ಅಂತ ಹೇಳಿ ಬೇಬಿನ ಅಮ್ಮ ಸೆರಗ್‌ಲಿ ಕಣ್ಣೀರು ವರ್ಸಿಕಂಡೊ. ಅಷ್ಟಾಕನ ಚಾಮೆವ್ವ ಹೇಳ್ದೊ, ಅಲ್ಲಿ ಒಬ್ಬ ಮಣಿಯಾಣಿ ಉಟ್ಟ್. ಅಂವಾ ಎಂತ ಪೀಡೆ, ಕೊಲೆಗಳಿಗೂ, ಹೆದುರ್ದುಲೆಗಡ. ಅಲ್ಲಿಗೆ ಹೋಗಿ," ಆತ್ ಹೋದವೆ ಅಂತ ಬೇಬಿನ ಅಮ್ಮ ಅವರ ಮನೆ ಎಲ್ಲೀತಾ ಎಲ್ಲಾ ಕೇಳಿಕೊಂಡೋ.

ಆಗ ನಾನು ಹೇಳ್ದೆ, ನೋಡಿ ಬೇಬಿ ಬೆಳೀತಾ ಇರುವ ಗೂಡೆ. ದೇಹಲಿ ರಕ್ತ ಕಮ್ಮಿ ಆಕನ ಸುಸ್ತಾಗಿ ತಲೆ ತಿರ್ಗಿದೆ. ಅದಿಕ್ಕೆ ಡಾಕ್ಟ್ರ ಹತ್ರ ಹೋಗಿ ರಕ್ತ ತುಂಬಿಕೆ ಮಾತ್ರೆ, ಟಾನಿಕ್ ತಕೊ ಣೊಕು. ಹಾಲ್, ಹಣ್ಣ್, ಸೊಪ್ಪು, ತರಕಾರಿ ಎಲ್ಲಾ ಚೆನ್ನಾಗಿ ತಿನ್ನೋಕು. ಅದ್‌ಬುಟ್ಟ್ ನೀವು ಮಾಟ, ಮಂತ್ರ ಅಂತ ಹೇಳಿರೆ ಸರಿ ಆದೆನಾ ? ಹೇಳಿ ? ಅಷ್ಟಾಕನ ಚಾಮೆವ್ವ ಹೇಳ್ದೊ ಅಯ್ಯೋ ನೀವು ಈಗಿನ ಕಾಲದ ಬರ ಕಲ್ತ ಗೂಡೆಗ ನಿಮಿಗೆ ಅದೆಲ್ಲ ಗೊತ್ತಿದ್ರ್ಗ. ನಮ್ಮ ಕಾಲಲಿ ಅದೆಲ್ಲ ಎಲ್ಲಿ ಇತ್ತ್ ?

ಅಷ್ಟಾಕನ ಮೊದುವೆ ಮನೆಲಿ ಸರ್ವರೂ ಊಟಕೆ ಏಳೊಕು ಅಂತ ಹೇಳಿ ನೀರ್‌ಕೊಟ್ಟೊ. ನಾವು ಕವರ್ ಕಟ್ಟಿ, ಊಟ ಮುಗ್ಸಿ ಮನೆಕಡೆ ಹೊರಟೊ.

ದಾರಿಲಿ ಬಾಕನ ನಾನ್ ಬೇಬಿನ ಅಮ್ಮನ್ನೊಟ್ಟಿಗೆ ಹೇಳ್ದೆ ನೋಡಿ ಅಕ್ಕ, ನಾಳೆ ನಂಗೆ ಪೇಟೆಗೆ ಹೋಕೆ ಉಟ್ಟ್. ನೀವು ಬೇಬಿನ ಕರ್‌ಕಂಡ್ ಬನ್ನಿ. ನಾವು ಡಾಕ್ಟ್ರ ಹತ್ರ ಪೋಯಿ. ಆತ್ ಅಮ್ಮ ಅಂತ ಬೇಬಿನ ಅಮ್ಮ ಹೇಳ್ದೊ.

ಮಾರ್ನೆ ದಿನ ನಾವು ಡಾಕ್ಟ್ರ ಹತ್ರ ಹೋದೊ. ಅಲ್ಲಿ ಡಾಕ್ಟ್ರ

[20 ನೇ ಪುಟ ನೋಡಿ]

ಧಾರವಾಹಿ - 8

ಮೂಲಕಥೆ : ಅಶ್ವಥಿ ಅರವಿಂದ್

ಅರೆಭಾಷೆಗೆ : ಎಂ.ಇ. ಮಹಮ್ಮದ್

ಕರಿ ಚಿನ್ನ

ಕಳ್ದ ಸಂಚಿಕೆಲಿ......

ಮಾರ್ನೆ ಬೆಳ್ಗೆ ಗೌರ ತಲೆ ಎತ್ತಿಕಾಗದ ಸ್ಥಿತಿಲಿ ನಿದ್ದೆಂದ ಎದ್ದ್ ನಿತ್ಯಕರ್ಮ ಮುಗ್ಸಿ ರಂಜನ್ ಏಳುದರ್ನೆ ಕಾದ್ ಕುದ್ದಿದ್ದದೆ. ರಂಜನ್ ಎದ್ದ್ ಬ್ರೇಕ್ ಫಾಸ್ಟ್ ಮಾಡಿ ಅವುಳ್ನ ಕರ್ಕಂಡ್ ಸೀದ ಪರಿಚಯಸ್ಥ ಡಾಕ್ಟ್ರ ಹತ್ರ ಹೋದೆ. ಅವ್ಳ ಹೊಟ್ಟೆಲಿರೊ ಕೂಸುನ ಅಭಾರ್ಷನ್ ಮಾಡಿ ತೆಗ್ಯಕೆ ಹೇಳಿ, ದುಡ್ಡ್ ತುಂಬಿದ ಪರ್ಸ್‌ನ ಡಾಕ್ಟ್ರ ಟೇಬಲ್ ಮೇಲೆ ಮಡ್ಗಿದೆ. ಆಗ ಡಾಕ್ಟ್ರ ನೀ ಹೇಳ್ದಂಗೆಲ್ಲ ಮಾಡಿಕೆ ಕಾನೂನಿಲ್ಲೆ. ಕಾನೂನು ಬುಟ್ಟ್ ನಡಿಯುಂವ ನಾನಲ್ಲ. ಅಭಾರ್ಷನ್‌ಗೆ ಅವ್ಳ ಒಪ್ಪಿಗೆ ಬೇಕ್. ಹೆಂಗಾರ್ ದುಡ್ಡ್ ಕೊಟ್ಟ್ ಅವ್ಳ ಒಪ್ಪಿಸಿಕೆ ಆದುಲ್ಯಾತ ಡಾಕ್ಟ್ರ ಕೇಳ್ದೆ.

ಮುಂದೆ ಓದಿ......

"ಒಳ್ಳೆ ಮಾತ್ ನಿಮ್ಮದ್ ! ನಾನ್ ಈ ಊರಿಡೀ ನಿಂಗೆ ಕೊಟ್ನೇತ ಹೇಳ್ರೂ ಆ ಗೂಡೆ ಕೇಳ್ದುಲೆಲ್ಲ ಹೇಳಿ. ಅವಳಿಗೆ ಈಗ ಬೇಕಾದ್ದ್ ನಾನ್ ಮಾತ್ರ. ಎಲ್ಲ ನನ್ನ ಸಿಕ್ಸಿಕೆ ಇರೊ ಐಡಿಯಾ ಅವುಳ್ದ್. ಅವ್ಳ ಹೊಟ್ಟೆಲಿ ಇರುದರ್ನ ಕರಗ್ಸಿಬುಟ್ರೆ ಮತ್ತೆ ಯಾವ ರಗಳೇನೂ ಇಲ್ಲೆ. ಹಣ ಎಸ್ಟ್ ಬೇಕಾದ್ರೂ ನಾನ್ ಕೊಟ್ನೇತ ಹೇಳ್ದಲ್ಲ ಡಾಕ್ಟ್ರೆ ?"

"ಮಿಸ್ಟರ್ ರಂಜನ್, ಈ ವಿಷಯಲಿ ನಂಗೆ ಹಣ ಮುಖ್ಯ ಅಲ್ಲ. ನನ್ನ ಆಸ್ಪತ್ರೆನ ಹೆಸ್ರ್ ಮುಖ್ಯ. ನನ್ನ ದುರದೃಷ್ಟಕ್ಕೆ ಏನಾರ್ ಹೆಚ್ಚ್ ಕಮ್ಮಿ ಆದರೆ ನನ್ನ ಪ್ರೊಫೆಷನ್ ನೀರ್ಲಿ ಬುಟ್ಟಂಗಾದು. ಮತ್ತೆ ಈ ಊರವರ್ನ, ಪೇಪರ್‌ನವರ್ನ ತಡ್ದ್ ನಿಲ್ಸಿಕೆ ಬತ್ತ್. ಪೇಪರ್‌ನವು ಈಗಳೆ ಮೆಡಿಕಲ್‌ಗೆ ಸಂಬಂಧಿಸಿದ ತೊಂದರೆಗಳ್ನ ದಪ್ಪ ಅಕ್ಷರಲಿ ಪ್ರಕಟಿಸಿ ಬುಟ್ಟೊಳೊ. ಅವ್ಕೆ ಸೊಲ್ಪ ಸಿಕ್ಕರೆ ಸಾಕ್. ಎಲ್ಲಾ ಕಂಡ್‌ಹಿಡ್ದ್ ಬೇರ್ ಸಮೇತ ಕಿತ್ತ್ ಬುಟ್ಟವೆ. ನೀನ್ ಆ ಗೂಡೆನ ಕರಿ, ನಾನ್ ಮಾತಾಡಿ ನೋಡ್ನೆ.

ಡಾಕ್ಟರ್ ಹೇಳ್ತ್.

"ಬಸ್ರೀಂತಾದ್ರೆ ನಾವ್ ಇಂದೇ ರಿಜಿಸ್ಟರ್ ಮೊದ್ವೆ ಮಾಡಿಕಣಾಂತ ನಾನ್ ಅವಳಕ್ಕಲೆ ಹೇಳಿಯೊಳೆ ಡಾಕ್ಟರ್. ನೀವು ಮಾತಾಡ್ಯಾಕನ ಅದ್ರ ಮರ್ತ್‌ಬುಡ್ಬಡಿ."

"ಗೌರಾ, ನಿನ್ನ ಡಾಕ್ಟರ್ ಕರೀತ ಒಳೊ ಬಾ"

ರಂಜನ್ ಗೌರನ ಡಾಕ್ಟರ್ ಕ್ಯಾಬಿನ್‌ಗೆ ಕರ್ಕಂಡ್‌ಹೋತ್. ಅಂವ ಪ್ರೀತಿ ತೋರಿಸ್ಕಂಡ್ ಅವಳ ಹೆಗ್‌ಲ್ ಮೇಲೆ ಕೈ ಇಸಿಕಂಡ್ ನಿತ್ತತ್.

"ನಿನ್ನ ಹೆಸ್ರ್ ?"

"ಗೌರ"

"ನೋಡಮ್ಮ ಗೌರ, ಮೊದ್ವೆ ಮತ್ತೆ ಹೆರಿಗೆ ಜತೇಲಿ ಆದ್ರೆ ಅದ್ ನಾಚಿಕೆ ಗೇಡಿನ ವಿಚಾರ, ಹುಟ್ಟುದ ಕೂಸ್‌ನ ಬಾಳ್ ಭವಿಷ್ಯಕ್ಕೆ ಅದೊಂದ್ ಕರಿಚುಕ್ಕಿ ಆಕೂ ಸಾಕ್. ಅದಲ್ಲದೆ ಮನೆವರ ವಿರೋಧ ಮಾಡ್ಕಂಡ್ ರಿಜಿಸ್ಟರ್ ಮೊದ್ವೆ ಮಾಡಿಕಂಡ್ರೆ ರಂಜನ್‌ಗೆ ಆಸ್ತಿಲಿ ಪಾಲೂ ಸಿಕ್ಕದೇ ಆದೆ. ಅದರ್‌ಂದ ನೀನ್ ಅಭಾರ್ಷನ್‌ಗೆ ಒಪ್ಪಿಕಣ್ದು ಒಳ್ಳೆದ್‌ಂತ ನಂಗೆ ಅನ್ಸಿದೆ. ಇಲ್ಲಿ ಡಾಕ್ಟರ್ ಶೈಲಜಾಂತ ಒಳೊ, ಈ ವಿಷಯಲಿ ಅವ್ಕೆ ಒಳ್ಳೆ ಅನುಭವ ಉಟ್ಟ್. ಅಭಾರ್ಷನ್ ಮಾಡ್ದ ಮೇಲೆ ಆಸ್ಪತ್ರೆಲಿ ಅಡ್ಮಿಟ್ ಆಕೂಂತಿಲ್ಲೆ. ಆರಾಮ್‌ಲಿ ಮುಂದಕ್ಕೆ ಬದ್ಕಿಕೂ ತೊಂದರೆ ಇಲ್ಲೆ."

ಚೆಕ್‌ಅಪ್, ಲ್ಯಾಬ್ ಟೆಸ್ಟ್‌ಂತ ಗ್ಯಾನ ಮಾಡಿಕಂಡ್ ಬಂದ ಗೌರಂಗೆ ಡಾಕ್ಟರ್‌ನ ಮಾತ್ ಕೆಮಿಗೆ ಸೀಸ ಕಾಸಿ ಹುಯ್ದಂಗೆ ಆತ್.

"ಸಾಕ್ ಡಾಕ್ಟರ್"

ಅವ್ಳ ಕುದ್ದಲ್ಲಿಂದ ಸಡನ್ ಎದ್ದತ್.

"ನಾನ್ ನಿಮ್ಮ ಉಪದೇಶ ಕೇಳಿಕೆ ಬಂದದ್ ಅಲ್ಲ, ಬೇಕಾಕನ ಕೂಸ್‌ನ ಹೆರಿಕೂ, ಬೇಡದಿರ್ಕನ ತೆಗಿಯಕೂ ಇರ್ದಲ್ಲ ಹೆಣ್ಣ್‌ಜನ್ರ ಹೊಟ್ಟೆ. ಯಾರಾದ್ರು ಒಬ್ಬನ ತೋರ್ಸಿ ಇಂವ ಕೂಸ್‌ನ ಅಪ್ಪಾಂ ತೇಳ್ವ ಸಂತಾನ ನಂದಲ್ಲ."

ಗೌರ ಸಿಟ್ಟ್‌ಲೇ ಹೇಳ್ತ್.

ಡಾಕ್ಟರ್ ಗಿರಿಧರ್‌ಗೆ ಏನ್ ಹೇಳಕೂಂತಲೇ ಗೊತ್ತಾತ್ತಿಲ್ಲೆ. ಗೌರ ಹೋಗಿ ಜೀಪಿಗೆ ಹತ್ತಿತ್. ಕೈಲಿ ಮುಷ್ಟಿ ಹಿಡ್ಕಂಡ್, ಹಲ್ಲ್‌ಕಚ್ಚಿಕಂಡ್ ರಂಜನ್ ಅವಳ ದವಡೆಗೆ ಎರಡ್ ಬಾರ್ಸೊಕೂಂತ ಅವಂಗೆ ಅನ್ನಿಸ್ತ್.

ಇರ್ ಹೊಟೇಲ್ ತಲಪಲಿ, ನಿನ್ನ ಶನಿ ಬುಡ್ಸಿನೇಂತ ಹೇಳಿಕಂಡ್ ಅಂವ ಜೀಪಿಗೆ ಹತ್ತಿ ಕುದ್ದತ್.

ರಿಜಿಸ್ಟರ್ ಮೊದ್ವೆ ಮಾಡಿಕಣಿಕೆ ಹೊರಟಂವ ಆಸ್ಪತ್ರೆ ಕಡೆಗೆ ಜೀಪ್ ಓಡ್ಸಕನ ನಾನ್ ಗ್ಯಾನ ಮಾಡ್ದೆ. ಇದ್ ನನ್ನ ಸಿಕ್ಕಿಸಿಕೆ ಮಾಡೊ ಕಣೇಂತ. ಇನ್ನೀಗ ಎಂತ ಮಾಡ್ದು. ಬಂದದ್ದೆಲ್ಲ ಅನುಭವಿಸುದು ಅಷ್ಟೆ. ಮತ್ತೆ ಬೇರೆ ಎಂತ ಮಾಡಿಕೆ ಆದೆ? ಗೂಡೆಯಾಗಿ ಹುಟ್ಟಿದರ, ಪ್ರೀತಿಸಿದ್ದರ ಫಲ ಇದ್. ಅವ್ಳ ಒಂದ್ ದೊಡ್ಡ ಉಸ್ರ್ ಬುಟ್ಟತ್.

ಹೆದ್ರಿಸಿದಂಗೆ ಅಂವ ಹೊಟೇಲ್‌ಗೆ ಹೋಗಿ ತಲಪಿದಂಗೆ ಅವಳ ಮೇಲೆ ತಿರ್ಗಿ ಬೀತ್.

"ಆ ಡಾಕ್ಟರ್‌ನ ನೀನ್ ಅನಾವಶ್ಯಕವಾಗಿ ಅವಮಾನ ಮಾಡ್ದ ಅಲ್ಲನೆ, ಅದೂ ನನ್ನ ಮುಂದೆ. ನಿಂಗೆ ಹಂಗೆ ಮಾತಾದಿಕೆ ಧೈರ್ಯ ಬಾತಲ್ಲನೆ ಸೂಳೆ"

ಅಂವ ಅವಳ ದವಡೆಗೆ ನಾಲ್ಕ್ ಮಡ್ಗಿತ್.

ಗೌರ ಮರ್ಚತ್ಲೆ. ಪೆಟ್ಟ್ ತಿಂದ ದವಡೆ ಊದಿಕಂಡ್ರೂ ಅವ್ಳ ನಿತ್ತಲ್ಲಿಂದ ಅಲ್ಲಾಡ್ತ್ಲೆ.

"ನಿನ್ನೆ ರಾತ್ರಿ ನನ್ನ ವವಡೆನ ಮುದ್ದ್ ಮಾಡಿಕಂಡ್ ಪೂಜಿದ ಅದೇ ಕೈಲಿ ಇಂದ್ ನಂಗೆ ಹೊಡ್ದ. ನನ್ನ ಚಿನ್ನದ ಗಟ್ಟೆಂತ ಕರ್ದ ಅದೇ ನಾಲಿಗೆಲಿ ಇಂದ್ ನನ್ನ ಸೂಳೆಂತ ಕರ್ದ. ಆದ್ರೂ ನಾನ್ ಬೇಜರ ಮಾಡ್ವುಲೆ. ನಂಗೆ ನಿನ್ನ ಮೇಲೆ ಇರೊ ಪ್ರೀತಿ ಕೂಡ ಕಮ್ಮಿ ಆದುಲೆ"

ಗೌರ ಧೈರ್ಯಲೇ ಹೇಳ್ತ್.

"ಓ...ಬಾರಿ ಇವಳ ಪ್ರೀತಿ. ಪಾಪರ್ ನಾಡ್‌ಕೊಲ್ಲಿ ಮಾದಪ್ಪನ ಮಗಳ ಪ್ರೀತಿಗಾಗಿ ಬೋಳು ಗುಡ್ಡವೆಲ್ಲ ಕಾದ್‌ಕಂಡ್ ಕ್ಯೂ ನಿಂತೊಳೊ. ಏ ಗೂಡೆ,ಒಂದ್ ವಿಸ್ಯ ಲಾಯ್ಕ್ ಗ್ಯಾನ ಮಾಡ್ಕ. ನಿನ್ನ ಹೊಟ್ಟೆಲಿ ಇರೋ ಕೂಸ್‌ನ ನೀನ್ ಹೆರ್. ಆದರೆ ಸಾಕಿನೇಂತ ಮಾತ್ರ ಗ್ಯಾನ ಮಾಡ್ಬಡ. ಈ ಪ್ರಪಂಚ ಕಂಡ ಗಳಿಗೆಲೇ ನಾನ್ ಆ ಕೂಸ್‌ನ ಕರ್ಳ್ ಎಳ್ದ್ ಕಾವೇರಿ ಹೊಳೆಗೆ ಬಿಸಾಕದಿದ್ರೆ ಕೇಳ್."

ರಂಜನ್ ಹಲ್ಲ್ ಕಚ್ಚಿಕಂಡೇ ಹೇಳ್ತ್.

ಯಾರ್, ಯಾರ ಕರ್ಳ್‌ನ ಎಳೆಯದೂತ ತೀರ್ಮಾನ ಮಾಡೊಂವ. ಆ ದೇವ್ರು ತಾನೆ ಸ್ವಂತ ಅಪ್ಪನ ಕೈಲೇ ಕೂಸ್‌ಗೆ ಮರಣತ ಇಟ್ಟದ್ರೆ ನಾನ್ ಸಹಿಸಿಕೆ ತಯಾರೊಳೆ.

"ಏನ್ನೇ ಮಾತ್, ಮಾತ್ಗ್ ನೀನ್ ಉತ್ತರ ಹೇಳ್ತಾಒಳಲ್ಲ ?"

ಬೋರುಗುಡ್ಡ ದೇವಯ್ಯನ ಮಂಜ ರಂಜನ್ ಅವಳ ಕಣ್ಣ್, ಮೊಕ ನೋಡ್ದೆ ಹೊಡ್ತ್. ಅವನ ಪಟ್ಟ್ ಸಹಿಸಿಕ ಆಗ್ದೆ ಆ ಬಸ್ರಿ ಹೆಂಗ್ಸ್ ಅಡಿಗೆ ಬಿದ್ದ್‌ಹೋತ್.

ಅಂವ ರೂಮ್‌ಂದ ಹೊರಗೆ ಹೋಗಿ ಬಾಗ್ಲ್ ಹಾಕಿತ್. ಗೌರ ನರಳಿಕಂಡ್ ಎದ್ದ್, ಬಿದ್ದ್ ಸಮಯ ಕಳ್ತ್. ಮಧ್ಯಾಹ್ನದ ಹೊತ್ತಿಗೆ ಅವ್ಳ ಮೆಲ್ಲೆ ಎದ್ದತ್. ಅವ್ಳಿಗೆ ತುಂಬಾ ಹೊಟ್ಟೆಹಸಿತಿತ್ ಜೊತೆಗೆ ಕುಡಿಯಕೆ ಆಗಿ ಬೊತ್ತ್

ಯಾರ್ನ ಕರಿಯೊಕು, ಎಂತ ಹೇಳೊಕು ಒಂದೂ ಅವ್ಳಿಗೆ ಗೊತ್ತಾತ್‌ಲೆ. ಬಾಗ್ಲ್ ತೆಗಿಯೆಕೇಂತ ಎಳ್ದ್ ನೋಡ್ತ್ ಹೊರಗೆ ಬೀಗ ಹಾಕಿದ್ ಗೊತ್ತಾತ್. ನರಳ್‌ಕಂಡ್ ಹೊರಳಾಡ್‌ಕಂಡ್ ಅವ್ಳ ಮೆಲ್ಲೆ ಕಟ್ಲ್ ಕಾಲ್ ಹಿಡ್‌ಕಂಡ್ ಎದ್ದತ್. ಮೇಜದ ಮೇಲೆ ಜಗ್ಗ್‌ಲಿ ಇದ್ದ ನೀರ್‌ನೆಲ್ಲ ಕುಡ್ದ್ ಖಾಲಿ ಮಾಡ್ತ್.

ಅವ್ಳಿಗೆ ಒಂದ್ ತರ ಹೆದ್ರಿಕೆ ಆತ್. ಪಪ್ಪ, ಮಮ್ಮಿ, ಮಿೂರ, ತಾರನೆಲ್ಲ ಗ್ಯಾನ ಬಾತ್. ಕಣ್ಣ್‌ಲಿ ಇಳೀತಿದ್ದ ನೀರ್‌ನ ಕೂಡ ಒರ್ಸದೆ ಅವ್ಳ ಕಂಪನೆ ಮಲಗಿ ಮರ್ಗಿಕೆ ಸುರ್‌ಮಾಡ್ತ್.

ಲಾಯ್ಕ್ ಅಮುಲ್ ಏರಿಸ್ಕಂಡ್, ಸೂಳೆ ಸಂಗ ಮಾಡಿ, ರಾತ್ರಿ ಎಂಟ್‌ಗಂಟೆ ಹೊತ್ತಿಗೆ ರಂಜನ್ ಬಾತ್.

"ಏ ಏಳ್‌ನೇ ಗೂಡೆ ಪೋಯಿ"

"ಈ ರಾತ್ರಿ ಹೊತ್ತ್ ಎಲ್ಲಿಗೆ ?"

"ನಿನ್ನ ಅಪ್ಪನ ಮನೆಗೆ ಹೋಗಿ ಆ ಪಾಪರ್ ಮಾದಪ್ಪಂಗೆ ಹೇಳ್, ನನ್ನ ಮೇಲೆ ಒಂದ್ ಮ್ಯೆಂಟೆನೆನ್ಸ್ ಕೇಸ್ ಹಾಕಿಕೆ"

ಮಶೇಷ

[18ನೇ ಪುಟದಿಂದ]

ಬೇಬಿನ ಪರೀಕ್ಷೆ ಮಾಡಿ, ನೋಡಿ ಬೇಬಿನ ಶರೀರಲಿ ರಕ್ತ ಬಾರಿ ಕಮ್ಮಿ ಉಟ್ಟ್. ನೀವು ಮೊದ್ಲೆ ಯಾಕೆ ಕರ್ಕಂಡ್ ಬಾತ್ಲೆ. ಇಲ್ಲಿ ಇನ್ನಾದರ್ ಮೂರು ತಿಂಗ ಈ ಮಾತ್ರೆ ಮತ್ತೆ ಟಾನಿಕ್ ತಕಣಿ. ಜೊತೆಗೆ ಸೊಪ್ಪು ತರಕಾರಿ, ಹಣ್ಣ್ ಚೆನ್ನಾಗಿ ತಿನ್ನಕು ಅಂತ ಬೇಬಿಗೆ ಹೇಳ್ದೊ.

ಅಪ್ಪಾಟಕನ ಬೇಬಿನ ಅಮ್ಮ ಡಾಕ್ಟ್ರನ ಕೇಳ್ದೊ "ಹೌದು ಡಾಕ್ಟ್ರೆ ಇವಳಿಗೆ ಸೋಂಕು ಆದಂಗೆ ಆದು ಯಾಕೆ ?" ನೋಡಿ ಅವು ಸೋಂಕು, ಪೀಡೆ, ಕೊಲೆ ಅಂತ ಏನ್ನೂ ಇಲ್ಲೆ. ಬೆಳೆಯುವ ಹೆಣ್ಣ್‌ಮಕ್ಕಳಲ್ಲಿ ಶರೀರಕ್ಕೆ ರಕ್ತದ ಅಂಶ ಜಾಸ್ತಿ ಬೇಕಾದೆ. ಗರ್ಭಿಣಿ, ಬಾಣಂತಿಗಳಿಗೆ ರಕ್ತದ ಕೊರತೆ ಕಂಡ್ ಬಾಕನ ಸುಸ್ತಾದು, ತಲೆ ಸುತ್ತು ಬಾದು ಆದೆ. ಆಗ ತಕ್ಷಣ ವೈದ್ಯರ್ನ ಸಂಪರ್ಕಿಸಿರೆ ಅವು ಒಳ್ಳ ಸಲಹೆ ಮತ್ತೆ ಔಷಧಗಳ್ನ ಕೊಟ್ಟನೆ." ಆತ್ ಡಾಕ್ಟ್ರೆ ನಾವಿನ್ನು ಬಂದವೆ." ಅತ್ ಹೇಳಿ ನಾವು ಹೊರಗೆ ಬಂದೊ.

ಅಪ್ಪಾಟಕನ ಬೇಬಿನ ಅಮ್ಮ ಹೇಳ್ದೊ, "ನೋಡಮ್ಮಾ ನೀನ್ ಸುಮಿಗೆ ಒಳ್ಳ ಕಡೆ ಕರ್‌ಕಂಡ್ ಬಂದ. ಇಲ್ಲದಿದ್ದರೆ ನಾನ್ ಇನ್ನೂ ಮಾಟ ಮಂತ್ರ ಅಂತ ಹೋಕ್ತಾ ಇದ್ದೆ. ನನ್ನ ಕೂಸ್‌ನ ಆರೋಗ್ಯ ಹಾಳಾಗ್ತಿತ್ತ್" ಅಂತ ಹೇಳ್ದೊ. ಅದಿಕ್ಕೆ ನಾನ್ ಹೇಳ್ದೆ ಎಂತ ಕಾಯಿಲೆ ಬಂದರೂ ಆಸ್ಪತ್ರೆಗೆ ಹೋಗಿ. ಅದ್‌ಬುಟ್ಟ್ ನೀವು ಬೂದಿ, ಬಸ್ಮ ಕೊಡುವವರ ಹತ್ರ ಹೋಗಿ ಹಾಳಾಗ್‌ಬಡಿ. ಮಕ್ಕಳ ಆರೋಗ್ಯನ ಹಾಳ್‌ಮಾಡಿ, ಜೀವನ ಬಲಿ ಕೊಡ್‌ಬಡಿ. ಇಲ್ಲಿ ಕೂಸಿಗೆ ಜ್ವರ ಬಂದರೆ, ಅಲ್ಲಿ ಕೋಳಿ ತಲೆಕೊಯಿದ್ ಏನ್ ಪ್ರಯೋಜನ ? ಅದ್ ಬುಟ್ಟ್ ಜ್ವರ, ಕಾಯಿಲೆ ಯಾಕೆ ಬಾತ್, ಅದಿಕ್ಕೆ ಸರಿಯಾದ ಮೊದ್ದು ಎಂತದ್ ಅಂತ ತಿಳ್ಕಣಿ. ಆಸ್ಪತ್ರೆಗೆ ಹೋಗಿ. ಈಗ ಡಾಕ್ಟ್ರಗ ಆಸ್ಪತ್ರೆಗ ಬೇಕಾಹಷ್ಟ್ ಒಳೊ ಅಲ್ಲಾ?

ನಾವು ಮತ್ತೆ ಬೇಬಿಗೆ ಮೊದ್ದು ತಕಂಡ್ ಮನೆ ಕಡೆ ಹೊರ್‌ಟೊ.

○ ಪ್ರಸಾದಿನಿ ಮುಡಪ್ಪಾಡಿ
ಕೆ. ಆರ್. ನಗರ

ಓದುಗರ ಗಮನಕ್ಕೆ

ಈ ಸಂಚಿಕೆ ಕಳ್ದವಾರ 19ನೇ ತಾರೀಖಿಗೆ ನಿಮ್ಮ ಕೈಗೆ ಸೇರಕ್ಕಾಯ್ತ್. ಕಾರಣ ಪೊಸ್ಟಾಫಿಸ್ ಸ್ಟ್ರೈಕ್‌ಂದಾಗಿ ಒಂದು ವಾರ ತಡವಾಗಿ ನಿಮ್ಮ ಕೈ ಸೇರ್ದಕ್ಕೆ ಕ್ಷಮಿಸಕು.

—ಸಂಪಾದಕಿ

K.R.N.N. 240

10-01-96 TCI Kar. 09592

ಮನದೊಳಗೆನ್ನ ಆಶೀರ್ವಾದವು ನಿಮಗೆ,
ದೇವರು ದೊಡ್ಡವನು, ಕಾಯಕವೇ ಕೈಲಾಸ,
ಮುಂದುವರಿಸಿ ಅಣ್ಣ

ಶ್ರೀ ಆಜಡ್ಕ ಯಂ. ಕೃಷ್ಣಪ್ಪ

[ಮಾಜಿ ಕಾರ್ಯದರ್ಶಿ, ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ
ಜಿಲ್ಲಾ ಮಾಜಿ RSS ಸಂಘಟಕರು]

ಪತ್ನಿ : **ಕಮಲಾಕ್ಷಿ**

ಮಕ್ಕಳು : **ಭಾಗ್ಯಸುಧಾ, ಯತಿರಾಜ್‌ಗೌಡ**

ಶುಭಾಶಯಗಳು

ಯಾವುದೇ ತೊಂದರೆಯಿದ್ದರೂ ಧೈರ್ಯವಾಗಿ ಎದುರಿಸಿ
ಮುನ್ನಡೆಯಿರಿ.

ಯಿಂದ : **ಆಜಡ್ಕ ಪೂವಯ್ಯ ಪಳಂಗಪ್ಪ,**
ಕಾಫಿ ಪ್ಲಾಂಟರ್
ಅತ್ತೂರು ನಲ್ಲೂರು ಗ್ರಾಮ ಮತ್ತು ಅಂಚೆ, ಸುಂಟಿಕೊಪ್ಪ, ಕೊಡಗು
ಶ್ರೀಮತಿ ಶೈಲಜ ಪಳಂಗಪ್ಪ ಮತ್ತು ಮಕ್ಕಳು–ಚಿರಾಗ್, ವಂದಿತಾ
ದೂರವಾಣಿ : **(08276) 63252**

ಪ್ರಕಟಣೆ

ಕೊಡಗು ಗೌಡ ವಿದ್ಯಾಸಂಘ ಮೈಸೂರು ಶಾಖೆಯ ವತಿಯಿಂದ ನಡೆಯಲ್ಪಡುವ ವಿದ್ಯಾರ್ಥಿ ನಿಲಯದ ಪ್ರವೇಶಕ್ಕಾಗಿ ಅರ್ಜಿ ಕೋರಲಾಗಿದೆ. ಆಸಕ್ತ ವಿದ್ಯಾರ್ಥಿಗಳು ದಿನಾಂಕ 15–8–98 ರೊಳಗೆ ನಿಲಯದ ವ್ಯವಸ್ಥಾಪಕರು ಕೊಡಗು ಗೌಡ ವಿದ್ಯಾಸಂಘ, ಜಯಲಕ್ಷ್ಮೀಪುರಂ, ಮೈಸೂರು-12 ಇವರನ್ನು ಸಂಪರ್ಕಿಸುವುದು.

ಕೊಡಗು ಗೌಡರಿಗೆ ಪ್ರಾಧಾನ್ಯತೆ ನೀಡಲಾಗುವುದು.
ಆಸಕ್ತರು ಇದರ ಉಪಯೋಗವನ್ನು ಪಡೆದುಕೊಳ್ಳಲು ಕೋರಲಾಗಿದೆ.

ಅಧ್ಯಕ್ಷರು
ಮೈಸೂರು ಶಾಖೆ

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore. Editor PATTADA. P. SHEELAMANI, No. 35, 1st Cross, 4th Block (Near Divisional Telephone Office) Jayalakshmipuram, Mysore-570 012 Phone : 516771